ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ

ವಾರ್ತಾಪತ್ರ

(ತ್ರೈಮಾಸಿಕ ಪತ್ರಿಕೆ)

ಸಂಪುಟ : ೦೧
ಸಂಚಿಕೆ : ೦೧

೧

(ಖಾಸಗಿ ಪ್ರಸಾರಕ್ಕಾಗಿ ಮಾತ್ರ)

ಜನವರಿ-ಮಾರ್ಚ್ ೨೦೦೭


ಸಂಪಾದಕರು
ಎಸ್.ವಿ. ಶ್ರೀನಿವಾಸರಾವ್

ಪರಿವಿಡಿ

ವಿಳಾಸ
ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ
೩/೪ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ
ಬೆಂಗಳೂರು – ೧೯

ಶಾಖೆ
ಬೆಳ್ಳೂರು, ನಾಗಮಂಗಲ ತಾ||
ಮಂಡ್ಯ ಜಿಲ್ಲೆ

ಮನವಿ



ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ವಾರ್ತಾಪತ್ರ ನಿಮ್ಮ ಕೈಯಲ್ಲಿದೆ. ಹಿಂದೆ ನಮ್ಮ ಪ್ರತಿಷ್ಠಾನದ ಷಾಣ್ಮಾಸಿಕ ಪತ್ರಿಕೆಯಾದ 'ಕರ್ನಾಟಕ ಲೋಚನ'ದಲ್ಲಿ, ಪ್ರತಿಷ್ಠಾನದ ವಾರ್ತೆಗಳು ಪ್ರಕಟವಾಗುತ್ತಿದ್ದುವು. ಅಲ್ಲಿನ ವಾರ್ತೆಗಳನ್ನು ಮತ್ತು ಸಾಹಿತ್ಯದ ಸುದ್ದಿಗಳನ್ನು ಬೇರ್ಪಡಿಸಿ, ವಾರ್ತಾಪತ್ರಕ್ಕೆ ವರ್ಗಾಯಿಸಿದ ಮೇಲೆ 'ಕರ್ನಾಟಕ ಲೋಚನ'ದಲ್ಲಿ ವಿದ್ವತ್ ಲೇಖನಗಳಿಗೆ ಹೆಚ್ಚಿನ ಪುಟಗಳು ದೊರೆತಿವೆ. ಜೊತೆಗೆ 'ಕರ್ನಾಟಕ ಲೋಚನ' ಸಂಪೂರ್ಣವಾಗಿ ವಿದ್ವತ್ ಪತ್ರಿಕೆಯಾಗುವುದು. ಅದರ ಗುಣಮಟ್ಟವನ್ನು ಹೆಚ್ಚಿಸುವ ದೃಷ್ಟಿಯಿಂದ ಈ ನಿರ್ಧಾರವನ್ನು ತೆಗೆದುಕೊಳ್ಳಲಾಯಿತು. ಇನ್ನು ಮುಂದೆ ಈ ವಾರ್ತಾಪತ್ರದಲ್ಲಿ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಬೆಂಗಳೂರು ಮತ್ತು ಬೆಳ್ಳೂರು ಕೇಂದ್ರಗಳ ಸುದ್ದಿಗಳನ್ನು ಪ್ರಕಟಿಸಲಾಗುವುದು. ಇದೇ ರೀತಿ, ಪ್ರತಿಷ್ಠಾನದ ಘನತೆಯನ್ನು ಹೆಚ್ಚಿಸುವ, ಗುಣಮಟ್ಟದ ಪುಸ್ತಕಗಳನ್ನು ಪ್ರಕಟಿಸುವ ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ. ಈಗಾಗಲೇ ದತ್ತಿ ಉಪನ್ಯಾಸಗಳನ್ನು ಹೊಸ ರೀತಿಯಲ್ಲಿ ವಿನ್ಯಾಸಗೊಳಿಸಲಾಗಿದೆ.

ಈ ವಾರ್ತಾಪತ್ರಕ್ಕೆ ಹಿರಿಯರಾದ ಪ್ರತಿಷ್ಠಾನದ ವ್ಯವಸ್ಥಾಪಕ ಕಾರ್ಯದರ್ಶಿಗಳಾದ ಶ್ರೀ ಎಸ್.ವಿ. ಶ್ರೀನಿವಾಸರಾವ್ ಅವರು ಸಂಪಾದಕರಾಗಿ, ಜವಾಬ್ದಾರಿಯನ್ನು ವಹಿಸಿಕೊಂಡಿರುವುದು ಸಂತೋಷದ ವಿಷಯ. ಇದನ್ನು ಪ್ರತಿಷ್ಠಾನದ ಸದಸ್ಯರು, ಅಭಿಮಾನಿಗಳು ಸ್ವಾಗತಿಸುವರೆಂದು ಆಶಿಸುತ್ತೇನೆ. ಪ್ರತಿಷ್ಠಾನದ ಕೆಲಸಕಾರ್ಯಗಳಲ್ಲಿ ಸಹಕರಿಸಿ, ಭಾಗವಹಿಸಿ. ನಮಸ್ಕಾರ.

ಚಿ. ಶ್ರೀನಿವಾಸರಾಜು



ದಿನಾಂಕ ೨೬-೧೧-೦೬ರಂದು ನಡೆದ ಕನ್ನಡ ಜನಶಕ್ತಿ ಮತ್ತು ಕನ್ನಡ ಗೆಳೆಯರ ಬಳಗ ಇವರಿಂದ ಏರಿ ಸಂಗೀತ ಪ್ರಾಥಮಿಕ ಶಿಕ್ಷಣದಲ್ಲಿ ಇಂಗ್ಲೀಷ್ ಕುರಿತ ಕಾರ್ಯಕ್ರಮ

ಸಂಪಾದಕೀಯ

ಪ್ರೊ॥ ಚಿ. ಶ್ರೀನಿವಾಸರಾಜು, ಇವರು ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ನೂತನ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಮೇಲೆ (೧೫-೧೦-೨೦೦೬) ಪ್ರತಿಷ್ಠಾನದ ಕಾರ್ಯ ಚಟುವಟಿಕೆಗಳಿಗೆ ಹೊಸ ಆಯಾಮ ನೀಡುತ್ತಿರುವುದಲ್ಲದೆ, ಇವುಗಳ ಪ್ರಚಾರ, ಪ್ರಸಾರಕ್ಕೆ ಹೆಚ್ಚು ಒತ್ತು ಕೊಡುವ ದೃಷ್ಟಿಯಿಂದ ಪ್ರತಿಷ್ಠಾನದ ಪ್ರತಿಷ್ಠಿತ 'ಕರ್ನಾಟಕ ಲೋಚನ'ದಲ್ಲಿನ ಕೆಲವಿಭಾಗಗಳನ್ನು ಹೊರತೆಗೆದು ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ 'ವಾರ್ತಾ ಪತ್ರ' (ತ್ರೈಮಾಸಿಕ)ಯಲ್ಲಿ ನೀಡಲು ಆಶಿಸಿದ್ದಾರೆ. 'ಕರ್ನಾಟಕ ಲೋಚನ'ವನ್ನು ವಿದ್ವತ್ ಲೇಖನಗಳಿಗೆ ಮಾತ್ರ ಮೀಸಲಿಡಲಾಗಿದೆ.

ಈ ದೃಷ್ಟಿಯಿಂದ ರೂಪುಗೊಂಡ ಪ್ರಥಮ 'ವಾರ್ತಾ ಪತ್ರ' ಇದೀಗ ತಮ್ಮ ಕೈ ಸೇರಿದೆ. ಸನ್ಮಾನ್ಯ ಸದಸ್ಯರುಗಳು ಪ್ರತಿಷ್ಠಾನದ ಮುಖ್ಯ ಮುಖವಾಣಿ ಯಾದ ಈ ಪತ್ರಿಕೆಯ ಗುಣಾವಗುಣಗಳನ್ನು ಪರಿಶೀಲಿಸಿ ಸೂಕ್ತ ಸಲಹೆ/ಸೂಚನೆಗಳನ್ನು ನೀಡಿ ಇದರ ಉಪಯುಕ್ತತೆಯನ್ನು ಹೆಚ್ಚಿಸಲು ನೆರವು ನೀಡಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

ದಿನಾಂಕ ೬-೧೦-೨೦೦೧ ರಿಂದ ೧೫-೧೦-೨೦೦೬ರ ವರೆಗೆ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಅಧ್ಯಕ್ಷರಾಗಿದ್ದ ಕನ್ನಡನಾಡಿನ ಖ್ಯಾತ ಸಂಶೋಧಕರು, ವಿದ್ವಾಂಸರು ಆದ ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ ಅವರು ಪ್ರತಿಷ್ಠಾನದ ಪ್ರಗತಿಗೆ ಸೂಕ್ತ ಕಾರ್ಯಯೋಜನೆಗಳನ್ನು ರೂಪಿಸಿ, ಸಮರ್ಥ ವಾಗಿ ನಡೆಸಿಕೊಂಡು ಬಂದುದಲ್ಲದೆ ಸೆಪ್ಟೆಂಬರ್ ೨೦೦೪ಲ್ಲಿ ಅದ್ದೂರಿಯಾಗಿ ಪ್ರತಿಷ್ಠಾನದ ರಜತ ಮಹೋತ್ಸವವನ್ನು ಆಯೋಜಿಸಿ, ಆಚರಿಸಿ ಪ್ರತಿಷ್ಠಾನದ ಪ್ರತಿಷ್ಠೆಗೆ ಗರಿ ಮೂಡಿಸಿದ ಕೀರ್ತಿಗೆ ಭಾಜನರಾಗಿದ್ದಾರೆ. ಅಷ್ಟೇ ಅಲ್ಲದೆ ಪ್ರತಿಷ್ಠಾನಕ್ಕೆ ಆರ್ಥಿಕ ಸುಭದ್ರತೆಯನ್ನು ಗಳಿಸಿಕೊಟ್ಟ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ.

ಪ್ರತಿಷ್ಠಾನವು ಅವರ ಐದು ವರ್ಷಗಳ ಅನನ್ಯ ಸೇವೆಯನ್ನು ಕೃತಜ್ಞತೆಯಿಂದ ನೆನೆಯುತ್ತದೆ ಹಾಗೂ ಗೌರವಪೂರ್ವಕವಾಗಿ ವಂದನೆಗಳನ್ನು ಸಲ್ಲಿಸುತ್ತಿದೆ. ಹೊಸ ಅಧ್ಯಕ್ಷರಾದ ಪ್ರೊ. ಚಿ. ಶ್ರೀನಿವಾಸರಾಜು ಅವರನ್ನು ಆತ್ಮೀಯವಾಗಿ ಸ್ವಾಗತಿಸುತ್ತ ಶುಭ ಕೋರುತ್ತಿದೆ.

ಸರ್ವರಿಗೂ ಪ್ರಸ್ತುತ ಹೊಸ ವರ್ಷಕ್ಕೆ ಹಾರ್ದಿಕ ಶುಭಾಶಯಗಳು.

ಎಸ್.ವಿ. ಶ್ರೀನಿವಾಸರಾವ್

ಹಸ್ತಪ್ರತಿ ಶಾಸ್ತ್ರ

ಹಸ್ತಪ್ರತಿ ಶಾಸ್ತ್ರಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳು

ಹಂಪಿ ಕನ್ನಡ ವಿಶ್ವವಿದ್ಯಾಲಯ ಮಾರ್ಚ್ ೧೭, ೧೮, ೨೦೦೬ರಂದು ಹಸ್ತಪ್ರತಿಶಾಸ್ತ್ರ ವಿಭಾಗದ ದಶಮಾನೋತ್ಸವ ಕಾರ್ಯಕ್ರಮವನ್ನು ವಿಶ್ವವಿದ್ಯಾಲಯದ ಆವರಣದಲ್ಲಿ ಆಚರಿಸಿತು. ಭಾರತೀಯರ ಗ್ರಂಥ ಸಂಪಾದನೆ, ದಕ್ಷಿಣ ಭಾರತೀಯ ಗ್ರಂಥ ಸಂಪಾದನೆ ೧, ೨, ಕನ್ನಡ ಗ್ರಂಥ ಸಂಪಾದನೆ ಗೋಷ್ಠಿಗಳು ನಡೆದವು. ಹಾಗೂ ಹಸ್ತಪ್ರತಿ ತಜ್ಞರುಗಳಾದ ಪ್ರೊ॥ ಜಿ. ಬ್ರಹ್ಮಪ್ಪ, ಪ್ರೊ॥ ಎನ್. ಬಸವಾರಾಧ್ಯ, ಪ್ರೊ॥ ಗೌ.ಮ. ಉಮಾಪತಿಶಾಸ್ತ್ರಿ, ಡಾ॥ ಎಂ.ಎಸ್. ಲಠ್ಠೆ, ಬಿ.ಎಸ್. ಸಣ್ಣಯ್ಯ, ಜಿ.ಜಿ. ಮಂಜುನಾಥನ್, ಪ್ರೊ॥ ಎಸ್. ಉಮಾಪತಿ, ಡಾ॥ ಟಿ.ಎನ್. ನಾಗರತ್ನ, ಶ್ರೀ ಎಸ್. ಶಿವಣ್ಣ, ಡಾ॥ ಬಿ.ವಿ. ಶಿರೂರ ಅವರನ್ನು ಸನ್ಮಾನಿಸಲಾಯಿತು.

ಅಖಿಲ ಕರ್ನಾಟಕ ನಾಲ್ಕನೆಯ ಹಸ್ತಪ್ರತಿ ಸಮ್ಮೇಳನ – ೨೦೦೬: ಈ ಕಾರ್ಯಕ್ರಮವನ್ನು ಕನ್ನಡ ವಿಶ್ವವಿದ್ಯಾಲಯ ಹಂಪಿ ಹಾಗು ತುಮಕೂರಿನ ಶ್ರೀ ಸಿದ್ಧಗಂಗಾ ವಿದ್ಯಾ ಸಂಸ್ಥೆ ಜೊತೆಗೂಡಿ ಸೆಪ್ಟಂಬರ್ ೨೭, ೨೮ ೨೦೦೬ ರಂದು ತುಮಕೂರಿನ ಸಿದ್ಧಗಂಗಾ ಬಾಲಕರ ಪದವಿ ಕಾಲೇಜಿನಲ್ಲಿ ಆಯೋಜಿಸಿದ್ದವು. ಡಾ॥ ಶ್ರೀ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ಈ ಕಾರ್ಯಕ್ರಮಗಳು ನಡೆದವು. ಗೋಷ್ಠಿಗಳಲ್ಲಿ ಆರ್. ನರಸಿಂಹಾಚಾರ್ ಸಾಹಿತ್ಯ ೧, ೨, ಹಸ್ತಪ್ರತಿ ಮತ್ತು ಗ್ರಂಥ ಸಂಪಾದನೆ: ಬಿ.ಎಸ್. ಸಣ್ಣಯ್ಯ ಅವರ ಸಾಧನೆ, ತುಮಕೂರು ಜಿಲ್ಲೆಯ ಹಸ್ತಪ್ರತಿ ಸಂಪತ್ತು, ಲೌಕಿಕ ಶಾಸ್ತ್ರ ಸಂಪತ್ತು ಕುರಿತ ಹಸ್ತಪ್ರತಿಗಳು. ಈ ಬಗ್ಗೆ ವಿಷಯಗಳು ಮಂಡನೆಗೊಂಡು ಚರ್ಚಿಸಲ್ಪಟ್ಟವು. ಕ್ರಮವಾಗಿ, ಈ ನಾಲ್ಕೂ ಗೋಷ್ಠಿಯ ಅಧ್ಯಕ್ಷತೆಯನ್ನು ಪ್ರೊ॥ ಡಿ. ಸಿದ್ಧಗಂಗಯ್ಯ, ಡಾ॥ ಎಚ್.ಎಸ್. ಗೋಪಾಲರಾವ್, ಪ್ರೊ॥ ಎಚ್.ವಿ. ವೀರಭದ್ರಯ್ಯ, ಡಾ॥ ವೈ.ಸಿ. ಭಾನುಮತಿ, ಶ್ರೀ ಸಿದ್ಧಗಂಗಯ್ಯ ಕಂಬಾಳು ವಹಿಸಿದ್ದರು.

ರಾಷ್ಟ್ರೀಯ ಹಸ್ತಪ್ರತಿ ದಿನಾಚರಣೆ – ೨; ಮತ್ತು ಹಸ್ತಪ್ರತಿ ತರಬೇತಿ ಶಿಬಿರ – ೬ಗಳು ಕನ್ನಡ ವಿಶ್ವವಿದ್ಯಾನಿಲಯ ಹಂಪಿ, ನ್ಯಾಷನಲ್ ಮಿಷನ್ ಫಾರ್ ಮ್ಯಾನ್ಸ್ ಸ್ಕ್ರಿಪ್ಟ್ ನವದೆಹಲಿ ಮತ್ತು ಡಾ॥ ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ ಧಾರವಾಡ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ದಿನಾಂಕ ಸೆಪ್ಟಂಬರ್ ೪ರಿಂದ ೭ರವರೆಗೆ ಏರ್ಪಡಿಸಿದ್ದವು. ಡಾ॥ ಬಿ.ಆರ್. ಹಿರೇಮಠ ಅಧ್ಯಕ್ಷತೆ ವಹಿಸಿದ್ದರು. ಡಾ॥ ವೀರಣ್ಣ ರಾಜೂರ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿದ್ದರು. ಡಾ॥ ಸುರೇಶ ಬಡಿಗೇರ, ಡಾ॥ ಬಿ.ವಿ. ವಲ್ಲಾಪುರ, ಡಾ॥ ಎ. ಮುರಿಗೆಪ್ಪ, ಶ್ರೀ ವಿನಯ್ ಲೂಥ್ರಾ, ಶ್ರೀ ವಿ. ಶಂಕರ್, ಸನ್ಮಾನ್ಯ ಶ್ರೀ ಬಸವರಾಜ ಹೊರಟ್ಟಿ (ಸಚಿವರು) ಭಾಗವಹಿಸಿದ್ದರು.



ಸ್ನಾತಕೋತ್ತರ ಸಂಶೋಧನಾ ಕೇಂದ್ರ ಇವರಿಂದ ನಡೆದ ಸಂಶೋಧನ ಕಮ್ಮಟದಲ್ಲಿ ಭಾಗವಹಿಸಿದವರು

ಪ್ರತಿಷ್ಠಾನದ ವಾರ್ತೆ

ಅ) ದತ್ತಿ ಕಾರ್ಯಕ್ರಮಗಳು

೧) **ಬೇಟೆರಾಯ ದೀಕ್ಷಿತ ದತ್ತಿ ಕಾರ್ಯಕ್ರಮ:** ದಿನಾಂಕ ೧೪-೧೦-೨೦೦೬ರಂದು ಶ್ರೀಮತಿ ಸಾವಿತ್ರಮ್ಮ ರಾಮಸ್ವಾಮಿ ಅವರಿಂದ ಶ್ರೀ ಎಂ. ವೀರಪ್ಪಮೋಯಿಲಿ ಅವರ 'ರಾಮಾಯಣದಲ್ಲಿ ವಾಲಿ ಪ್ರಸಂಗದ ವೈಶಿಷ್ಟ್ಯ'. ವಿಷಯದ ಬಗ್ಗೆ ಉಪನ್ಯಾಸ ನಡೆಯಿತು. ಡಾ॥ ಟಿ.ವಿ. ವೆಂಕಟಾಚಲಶಾಸ್ತ್ರಿ ಅವರು ಅಧ್ಯಕ್ಷತೆ ವಹಿಸಿದ್ದರು. 'ಸಂಸ್ಕೃತಿ ಕೇಂದ್ರ' ಮಲ್ಲೇಶ್ವರಂನಲ್ಲಿ ಕಾರ್ಯಕ್ರಮ ನಡೆಯಿತು. ಇದೇ ಸಂದರ್ಭದಲ್ಲಿ ಶ್ರೀಮತಿ ಸಾವಿತ್ರಮ್ಮ ಅವರಿಗೆ ೯೦ನೇ ಹುಟ್ಟು ಹಬ್ಬದ ಸವಿನೆನಪಿಗಾಗಿ ಪ್ರತಿಷ್ಠಾನದಿಂದ ಗೌರವಾರ್ಪಣೆಯನ್ನು ಸಲ್ಲಿಸಲಾಯಿತು. ಬಂಧುಗಳು ಹೃತ್ಪೂರ್ವಕವಾಗಿ ಅಭಿನಂದಿಸಿದರು. ಸಾವಿತ್ರಮ್ಮನವರ ಕುಟುಂಬ ಕಾರ್ಯಕ್ರಮದ ಆತಿಥ್ಯವನ್ನು ವಹಿಸಿತ್ತು.

ಆ) ಸುವರ್ಣ ಕರ್ನಾಟಕ ಚಿಂತನಗೋಷ್ಠಿ ಕಾರ್ಯಕ್ರಮಗಳು:

೧) ದಿನಾಂಕ ೧೬-೦೭-೨೦೦೬ರಂದು ಕನ್ನಡ ಜಾಗೃತಿ ಸಮಾವೇಶ ಕಾರ್ಯಕ್ರಮವನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಕನ್ನಡ ಕ್ರಿಯಾ ಸಮಿತಿ ಸಹಯೋಗದೊಂದಿಗೆ ಏರ್ಪಡಿಸಲಾಗಿತ್ತು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ॥ ಸಿದ್ಧಲಿಂಗಯ್ಯ, ಅವರು ಉದ್ಘಾಟನೆ ಮಾಡಿದರು. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಕೇಂದ್ರ ಕನ್ನಡ ಕ್ರಿಯಾ ಸಮಿತಿಯ ಅಧ್ಯಕ್ಷರಾದ ಶ್ರೀ ವ.ಚ. ಚನ್ನೇಗೌಡ ಅವರು ಅಧ್ಯಕ್ಷತೆ ವಹಿಸಿದ್ದರು. ಇಡೀ ದಿನ ಚಿಂತನಗೋಷ್ಠಿ ಮತ್ತು ಸಂವಾದಗಳು ನಡೆಯಿತು.

೨) ದಿನಾಂಕ ೧೦-೦೯-೨೦೦೬ರಂದು ಎಂ.ವಿ.ಸಿ. ಸಂಸ್ಮರಣೆ, ಸಿರಿಸಂಗೀತ, "ಗಡಿವಿಚಾರ: ಕನ್ನಡಿಗರ ನಿಲುವು, ಚಿಂತನಗೋಷ್ಠಿ" ಕಾರ್ಯಕ್ರಮಗಳು ನಡೆದವು. ಪ್ರಸಿದ್ಧ ಸಾಹಿತಿಗಳಾದ ಪ್ರೊ॥ ಎಲ್.ಎಸ್. ಶೇಷಗಿರಿರಾವ್ ಉದ್ಘಾಟನೆ ಮಾಡಿದರು. ಗೌರವಾಧ್ಯಕ್ಷರಾದ ಶ್ರೀ ಜಿ. ನಾರಾಯಣ ಅವರು ಅಧ್ಯಕ್ಷತೆ ವಹಿಸಿದ್ದರು. ಮಾಜಿ ಸಂಸದರಾದ ಶ್ರೀ ವಿ.ಎಸ್. ಕೃಷ್ಣಯ್ಯರ್ ಮತ್ತು ಕನ್ನಡ ಪ್ರಾಧ್ಯಾಪಕಿ ಹಾಗೂ ಲೇಖಕಿ ಡಾ॥ ಎಸ್.ವಿ. ಪ್ರಭಾವತಿ ಅವರು ಮುಖ್ಯ ಅತಿಥಿಗಳಾಗಿದ್ದರು. ಶ್ರೀಮತಿ ಶಶಿಕಲಾ ತಂಡ ದವರಿಂದ 'ಸಿರಿಸಂಗೀತ' ಕಾರ್ಯಕ್ರಮ ನಡೆಯಿತು.

೩) ದಿನಾಂಕ, ೨೬-೧೧-೨೦೦೬ ರಂದು ಭಾನುವಾರ 'ಕನ್ನಡ ಗೆಳೆಯರ ಬಳಗ' ಮತ್ತು 'ಕನ್ನಡ ಜನಶಕ್ತಿ' ಸಹಯೋಗದಲ್ಲಿ 'ಪ್ರಾಥಮಿಕ ಶಿಕ್ಷಣದಲ್ಲಿ ಇಂಗ್ಲಿಷ್' ಚಿಂತನಗೋಷ್ಠಿ ಕಾರ್ಯಕ್ರಮ ನಡೆಯಿತು. ಡಾ॥ ಚಂದ್ರಶೇಖರ ಪಾಟೀಲ ಅವರು ಉದ್ಘಾಟನೆ ಮಾಡಿದರು. ಪ್ರೊ॥ ಚಿ. ಶ್ರೀನಿವಾಸರಾಜು ಅವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಎಚ್.ಎಸ್. ದೊರೆಸ್ವಾಮಿ, ಪ್ರೊ॥ ಎಂ.ಆರ್. ದೊರೆಸ್ವಾಮಿ, ಶ್ರೀಮತಿ ಬಿ.ಟಿ. ಲಲಿತಾ ನಾಯಕ್ ಮುಖ್ಯ ಅತಿಥಿಗಳಾಗಿದ್ದರು.

ಇ) ಶತಮಾನೋತ್ಸವ ಕಾರ್ಯಕ್ರಮಗಳು:

೧) ಕ.ವೆಂ. ರಾಘವಾಚಾರ್ ಶತಮಾನೋತ್ಸವ ಕಾರ್ಯಕ್ರಮ ದಿನಾಂಕ ೧೯-೦೮-೨೦೦೬ರಂದು ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಸಹಯೋಗದಲ್ಲಿ ನಡೆಯಿತು. ಪ್ರೊ॥ ಜಿ. ವೆಂಕಟ ಸುಬ್ಬಯ್ಯ ಅವರು ಉದ್ಘಾಟನೆ ಮಾಡಿದರು. ಕ.ವೆಂ. ರಾಘವಾಚಾರ್ ಅವರ ಜೀವನ, ವ್ಯಕ್ತಿತ್ವ, ಅವರ ಭಾಷೆ, ಸಾಹಿತ್ಯ ಕುರಿತು ಬೆಳಿಗ್ಗೆ ೧೦-೩೦ರಿಂದ ಸಂಜೆ ೮ರ ವರೆಗೆ ಕಾರ್ಯಕ್ರಮ ನಡೆಯಿತು.

೨) ದಿನಾಂಕ ೧೯-೧೧-೨೦೦೬ ರಂದು ತೀ.ನಂ.ಶ್ರೀ. ಶತಮಾನೋತ್ಸವ ವಿಚಾರಗೋಷ್ಠಿ ಕಾರ್ಯಕ್ರಮ ನಡೆಯಿತು. ಶ್ರೀ ಎನ್. ಬಸವಾರಾಧ್ಯ ಅವರು ಉದ್ಘಾಟನೆ ಮಾಡಿದರು. ತೀ.ನಂ.ಶ್ರೀ. ಜೀವನ – ವ್ಯಕ್ತಿತ್ವದ ಬಗ್ಗೆ ಪ್ರೊ॥ ತೀ.ಶ್ರೀ. ನಾಗಭೂಷಣ ಮಾತನಾಡಿದರು. 'ಕನ್ನಡ ನಿಘಂಟು ಕ್ಷೇತ್ರ'ದ ಬಗ್ಗೆ ಡಾ॥ ಕೆ.ವಿ. ನಾರಾಯಣ ಅವರು 'ಕನ್ನಡ ಭಾಷಾ ವಿಜ್ಞಾನ'ದ ಬಗ್ಗೆ ಡಾ॥ ಕೆ.ಪಿ. ಭಟ್ ಮಾತನಾಡಿದರು. ಪ್ರೊ॥ ಎಂ.ಎಚ್. ಕೃಷ್ಣಯ್ಯ ಅವರು ಅಧ್ಯಕ್ಷತೆ ವಹಿಸಿದ್ದರು.

೩) ದಿನಾಂಕ ೧೭-೧೨-೨೦೦೬ರಂದು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಚಿತ್ರದುರ್ಗ ಇವರ ಸಹಯೋಗದಲ್ಲಿ ಪ್ರೊ॥ ತೀ.ನಂ.ಶ್ರೀ, ಪ್ರೊ॥ ಡಿ.ಎಲ್. ನರಸಿಂಹಾಚಾರ್, ಪ್ರೊ॥ ತ.ಸು. ಶಾಮರಾಯ, ಡಾ॥ ಆ.ನೇ. ಉಪಾಧ್ಯೆ ಶತಮಾನೋತ್ಸವ ಮತ್ತು ಬಿ.ಎಂ.ಶ್ರೀ. ಕನ್ನಡ ಜಾಗೃತಿ ಹಸ್ತಪ್ರತಿ ಪ್ರದರ್ಶನ ನಡೆಯಿತು. ಡಾ॥ ಬಿ. ರಾಜಶೇಖರಪ್ಪ ಅವರು ಉದ್ಘಾಟನೆ ಮಾಡಿದರು. ಪ್ರೊ॥ ಚಿ. ಶ್ರೀನಿವಾಸರಾಜು, ತೀ.ನಂ.ಶ್ರೀ. ಬಗ್ಗೆ, ಪ್ರೊ॥ ಶುಭಚಂದ್ರ ಆ.ನೆ. ಉಪಾಧ್ಯೆ ಬಗ್ಗೆ, ಪ್ರೊ॥ ಎಚ್.ವಿ. ಶ್ರೀನಿವಾಸಶರ್ಮ ಮತ್ತು ಎಸ್.ವಿ. ಶ್ರೀನಿವಾಸರಾವ್, ತ.ಸು. ಶಾಮರಾಯರ ಬಗ್ಗೆ ಪ್ರೊ॥ ನಾ. ಗೀತಾಚಾರ್ಯ, ಡಿ.ಎಲ್.ಎನ್. ಬಗ್ಗೆ ಮಾತನಾಡಿದರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಕೆ.ಎಂ. ವೀರೇಶ್ ಅವರು ಮುಖ್ಯ ಅತಿಥಿಗಳಾಗಿದ್ದರು. ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ॥ ದೊಡ್ಡಮಲ್ಲಯ್ಯ ಅವರು ಅಧ್ಯಕ್ಷತೆ ವಹಿಸಿದ್ದರು.

೪) ಡಾ॥ ತ.ಸು. ಶಾಮರಾಯರ ಶತಮಾನೋತ್ಸವ ಕಾರ್ಯಕ್ರಮವನ್ನು ತಳುಕಿನ ವೆಂಕಣ್ಣಯ್ಯ ಯುವಕ ಸಂಘ, ಶ್ರೀ ತ.ರಾ.ಸು. ಯುವಕ ಸಂಘ ಸಹಯೋಗದೊಂದಿಗೆ ದಿನಾಂಕ ೧೮-೧೨-೨೦೦೬ರಂದು ಶ್ರೀ ಎಸ್.ಜಿ.ಟಿ. ಸರ್ಕಾರಿ ಪದವಿಪೂರ್ವ ಕಾಲೇಜು, ತಳುಕು ಇಲ್ಲಿ ತ.ಸು. ಶಾಮರಾಯರ ಛಾಯಾಚಿತ್ರದ ಅನಾವರಣದೊಂದಿಗೆ ನಡೆಯಿತು. ಶ್ರೀ ಡಿ. ಸುಧಾಕರ್, ಶಾಸಕರು ಚಳ್ಳಕೆರೆ, ಅಧ್ಯಕ್ಷತೆ ವಹಿಸಿದ್ದರು. ಶ್ರೀ ಎನ್.ವೈ. ಗೋಪಾಲಕೃಷ್ಣ, ಶ್ರೀಮತಿ ಅಂಬುಜಾ ತ.ರಾ.ಸು. ಮೈಸೂರು, ಪ್ರೊ॥ ಚಿ. ಶ್ರೀನಿವಾಸರಾಜು, ಎಚ್.ವಿ. ಶ್ರೀನಿವಾಸ ಶರ್ಮ, ಶ್ರೀ ಟಿ.ಎಸ್. ವೆಂಕಣ್ಣಯ್ಯ, ಪ್ರೊ॥ ನಾ. ಗೀತಾಚಾರ್ಯ ಅವರು ಮುಖ್ಯ ಅತಿಥಿಗಳಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

೫) ಪ್ರೊ॥ ತ.ಸು. ಶಾಮರಾವ್ ಶತಮಾನೋತ್ಸವ ಕಾರ್ಯಕ್ರಮವನ್ನು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು, ಚಳ್ಳಕೆರೆ ಇವರ ಸಹಯೋಗ ದಲ್ಲಿ ದಿನಾಂಕ ೧೮-೧೨-೨೦೦೬ರಂದು ನಡೆಯಿತು. ಶ್ರೀ ಬೆಳಗೆರೆ ಕೃಷ್ಣಶಾಸ್ತ್ರೀಗಳು ಉದ್ಘಾಟನೆ ಮಾಡಿದರು. ಪ್ರೊ॥ ಚಿ. ಶ್ರೀನಿವಾಸರಾಜು, ಶ್ರೀ ಎಚ್.ವಿ. ಶ್ರೀನಿವಾಸಶರ್ಮ, ಶ್ರೀ ಎಸ್.ವಿ. ಶ್ರೀನಿವಾಸರಾವ್ ಮುಖ್ಯ ಅತಿಥಿಗಳಾಗಿದ್ದರು. ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ (ಚಳ್ಳಕೆರೆ) ಶ್ರೀ ಪಿ. ತಿಪ್ಪೇಸ್ವಾಮಿ ಅವರು ಅಧ್ಯಕ್ಷತೆ ವಹಿಸಿದ್ದರು.

೬) ದಿನಾಂಕ ೧೯-೧೨-೨೦೦೬ರಂದು ಬೆಳಗೆರೆಯಲ್ಲಿ ತ.ಸು. ಶಾಮರಾವ್ ಶತಮಾನೋತ್ಸವ ಕಾರ್ಯಕ್ರಮ ಮತ್ತು ಬಿ.ಎಂ.ಶ್ರೀ. ಕನ್ನಡ ಜಾಗೃತಿ ಮತ್ತು ಹಸ್ತಪ್ರತಿ ಪ್ರದರ್ಶನ ಕಾರ್ಯಕ್ರಮ ನಡೆಯಿತು. ಶ್ರೀ ಬೆಳಗೆರೆ ಕೃಷ್ಣಶಾಸ್ತ್ರೀಗಳು ಅಧ್ಯಕ್ಷತೆ ವಹಿಸಿದ್ದರು. ಪ್ರೊ॥ ಗೀತಾಚಾರ್ಯ ಅವರು ಪ್ರಾಸ್ತಾವಿಕ ಭಾಷಣ ಮಾಡಿದರು. ಪ್ರೊ॥ ಚಿ. ಶ್ರೀನಿವಾಸರಾಜು ಉದ್ಘಾಟನೆ ಮಾಡಿದರು. ಶ್ರೀ ಎಸ್.ವಿ. ಶ್ರೀನಿವಾಸರಾವ್ ಮತ್ತು ಪ್ರೊ॥ ಎಚ್.ವಿ. ಶ್ರೀನಿವಾಸಶರ್ಮ ಅವರುಗಳು ಮುಖ್ಯ ಅತಿಥಿಗಳಾಗಿದ್ದರು.

(ಈ) ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರದ ಕಾರ್ಯಕ್ರಮಗಳು:

೧) ದಿನಾಂಕ ೧೧-೦೯-೨೦೦೬ ಮತ್ತು ೧೨-೦೯-೨೦೦೬ರಂದು ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಕನ್ನಡ, ವಿ.ವಿ. ಹಂಪಿ, ಇವರ ಸಹಯೋಗದಲ್ಲಿ 'ಇಂಗ್ಲಿಷ್ ಗೀತಗಳು; ಸಾಂಸ್ಕೃತಿಕ ಮುಖಾಮುಖಿ' ಹಾಗೂ ಪುಸ್ತಕ ಬಿಡುಗಡೆ ಕಾರ್ಯಕ್ರಮ ಡಾ॥ ಬಿ.ಎ. ವಿವೇಕರೈ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಡಾ॥ ಯು.ಆರ್. ಅನಂತಮೂರ್ತಿ ಅವರಿಂದ ಕಾರ್ಯಕ್ರಮದ ಉದ್ಘಾಟನೆ ನಡೆಯಿತು. ಎರಡು ದಿನದ ಕಾರ್ಯಕ್ರಮದಲ್ಲಿ ಡಾ॥ ರಾಮಚಂದ್ರದೇವ, ಪ್ರೊ॥ ವಿ.ಎಸ್. ಶ್ರೀಧರ್, ಡಾ॥ ಶಿವರಾಮ ಪಡಿಕ್ಕಲ್, ಡಾ॥ ವಿ.ಬಿ. ತಾರಕೇಶ್ವರ, ಕೆ.ಪಿ. ಸುರೇಶ, ಬಿ.ಯು. ಸುಮಾ, ಡಾ॥ ನಟರಾಜ್ ಹುಳಿಯಾರ್, ಡಾ॥ ಮಮತಾ ಜಿ. ಸಾಗರ, ಡಾ॥ ಚಿಂತಾಮಣಿ ಕೂಡ್ಲೆಕೆರೆ, ಡಾ॥ ಎಂ.ಎಸ್. ಆಶಾದೇವಿ, ಡಾ॥ ಅಮರೇಶ್ ನುಗಡೋಣಿ, ಡಾ॥ ಕವಿತಾ ರೈ, ಡಾ॥ ಜಿ.ಬಿ. ಹರೀಶ್, ಡಾ॥ ಎಚ್.ಎಸ್. ರಾಘವೇಂದ್ರರಾವ್, ಪ್ರೊ॥ ಓ.ಎಲ್. ನಾಗಭೂಷಣಸ್ವಾಮಿ ಇವರುಗಳು ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. 'ಬಿ.ಎಂ.ಶ್ರೀ.ಯವರ ಇಂಗ್ಲಿಷ್ ಗೀತಗಳು', ಹರಿಶ್ಚಂದ್ರ ಚಾರಿತ್ರ : 'ಸಾಂಸ್ಕೃತಿಕ ಮುಖಾಮುಖಿ' ಗ್ರಂಥಗಳನ್ನು ಡಾ॥ ಟಿ.ವಿ. ವೆಂಕಟಾಚಲಶಾಸ್ತ್ರಿಗಳು ಲೋಕಾರ್ಪಣ ಮಾಡಿದರು. ದಿನಾಂಕ ೧೨-೦೯-೨೦೦೬ರಂದು ಸಮಾರೋಪ ಸಮಾರಂಭ ಡಾ॥ ಗಿರಡ್ಡಿ ಗೋವಿಂದರಾಜ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ದಿನಾಂಕ ೧೬-೦೯-೨೦೦೬ರಂದು ಶನಿವಾರ ಎಂ.ಫಿಲ್. ತರಗತಿಗಳ ಉದ್ಘಾಟನೆಯನ್ನು ಪ್ರೊ॥ ಎಂ.ಆರ್. ದೊರೆಸ್ವಾಮಿ ಅವರು ಮಾಡಿದರು. ಪ್ರೊ॥ ಮಲ್ಲೇಪುರಂ ಜಿ. ವೆಂಕಟೇಶ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಡಾ॥ ಟಿ.ವಿ. ವೆಂಕಟಾಚಲ ಶಾಸ್ತ್ರೀ ಅವರು ಅಧ್ಯಕ್ಷತೆ ವಹಿಸಿದ್ದರು

ಎಂ.ಫಿಲ್. ೩ ತಿಂಗಳು ನಡೆದ ತರಗತಿಗಳ ಮುಕ್ತಾಯ ಸಮಾರಂಭ

ದಿನಾಂಕ ೦೨-೧೨-೨೦೦೬ರಂದು ಮುಕ್ತಾಯ ಸಮಾರಂಭದ ಅಧ್ಯಕ್ಷತೆಯನ್ನು ಪ್ರೊ॥ ಚಿ. ಶ್ರೀನಿವಾಸರಾಜು ಅವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಎಲ್ಲಾ ಅಧ್ಯಾಪಕ ವೃಂದದವರು ಭಾಗವಹಿಸಿದ್ದರು.

(ಉ) ಸಹೃದಯಗೋಷ್ಠಿ ಕಾರ್ಯಕ್ರಮ

ಪಿಎಚ್.ಡಿ. ವಿದ್ಯಾರ್ಥಿ ಸಂವಾದ ಗೋಷ್ಠಿಯಲ್ಲಿ ಶ್ರೀ ಮಂಜುನಾಥ ಅವರು 'ಬೆಂಗಳೂರು ಸ್ಥಳನಾಮ ಒಂದು ಟಿಪ್ಪಣಿ' ವಿಷಯವಾಗಿ ಮಾತನಾಡಿದರು. ಪ್ರೊ॥ ಚಿ. ಶ್ರೀನಿವಾಸರಾಜು ಅವರು ಅಧ್ಯಕ್ಷತೆ ವಹಿಸಿದ್ದರು. ❑

ಜುಲೈ ೨೦೦೬ರಿಂದ ಈಚೆಗೆ ಬಂದ ದಾನಗಳ ವಿವರ

೧) ಪ್ರತಿಷ್ಠಾನಕ್ಕೆ ದಾನ:

೧)	ಶ್ರೀ ಎನ್.ಎಸ್. ಕೃಷ್ಣಸ್ವಾಮಿ	ರೂ. ೫೦೦-೦೦
೨)	ಶ್ರೀ ಎಂ.ಎಸ್. ರಾಂಪ್ರಸಾದ್	೧,೦೦೧-೦೦
೩)	ಜನಾರ್ಧನ ಗೌರಮ್ಮ	೩೫೦-೦೦
೪)	ಜ್ಯೋತಿಶ್ವರ	೧೦೦-೦೦
೫)	ಎಸ್.ಟಿ. ರಾಧಾಕೃಷ್ಣ	೧೦೦-೦೦
೬)	ಶ್ರೀ ಟಿ.ಎಂ. ವೆಂಕಟೇಗೌಡ	೨೦೦-೦೦
೭)	ಶ್ರೀ ವರದರಾಜು	೫೦೦-೦೦
೮)	ಡಾ॥ ಕೆ.ಪಿ. ಭಟ್	೩೦೦-೦೦
೯)	ಪ್ರೊ॥ ನಾ. ಗೀತಾಚಾರ್ಯ	೨೦೦-೦೦
೧೦)	ಶ್ರೀ ಎನ್.ಎಸ್. ತುಂಗಮ್ಮ	೨೫೦-೦೦

೨) ಕಟ್ಟಡ ನಿಧಿಗೆ ದಾನ

೧)	ಶ್ರೀಮತಿ ನಾಗರತ್ನ ಸುದರ್ಶನ	೧೦೦೦-೦೦

೩) ಹಸ್ತಪ್ರತಿಗಳ ದಾನ

೧) ಗೋಖಲೆ ಸಾರ್ವಜನಿಕ ವಿಚಾರಸಂಸ್ಥೆ ೪೪ ಓಲೆಗರಿ ಕಟ್ಟುಗಳು

೪)ದತ್ತಿನಿಧಿಗೆ ದಾನ

೧)	ಪ್ರೊ॥ ಜಿ.ಎಸ್. ಸಿದ್ಧಲಿಂಗಯ್ಯ ಕ.ವೆಂ. ರಾಘವಾಚಾರ್ ದತ್ತಿನಿಧಿಗೆ ದಾನ	೫೦೦-೦೦
೨)	ಡಾ॥ ಟಿ.ವಿ. ವೆಂಕಟಾಚಲಶಾಸ್ತ್ರೀ	೫,೦೦೦-೦೦
೩)	ಪ್ರೊ॥ ಕ.ವೆಂ. ರಾಜಗೋಪಾಲ್	೫೦೦-೦೦
೪)	ಡಾ॥ ಕೆ.ಪಿ. ಭಟ್	೬೫೦-೦೦
೫)	ಎಂ.ಎಸ್. ವೆಂಕಟರಾಮಯ್ಯ	೧,೦೦೦-೦೦
೬)	ಶ್ರೀ ಎನ್. ಬಸವಾರಾಧ್ಯ	೧,೦೦೦-೦೦
೭)	ಕೃಪಾದೊರೆಸ್ವಾಮಿ	೫,೦೦೦-೦೦
೮)	ಶ್ರೀಮತಿ ಗೋದಾ	೧,೦೦೦-೦೦
೯)	ಸುನಂದ ನಾಗರಾಜ	೩,೦೦೦-೦೦
೧೦)	ಶ್ರೀಮತಿ ಆರ್. ಶಶಿಕಲ	೫,೦೦೦-೦೦
೧೧)	ಕೆ.ಆರ್. ರೋಹಿಣಿ	೧,೦೦೦-೦೦
೧೨)	ಶ್ರೀಮತಿ ಎಸ್. ರತ್ನಮ್ಮ	೧೦,೦೦೦-೦೦

೫) ಶತಮಾನೋತ್ಸವ ಕಾರ್ಯಕ್ರಮಕ್ಕೆ ಅನುದಾನ

೧)	ನಿರ್ದೇಶಕರು ಕನ್ನಡ ಸಂಸ್ಕೃತಿ ಇಲಾಖೆ ಬೆಂಗಳೂರು	೧೦,೦೦೦-೦೦

೬)ಉಪಕರಣ ದಾನ

೧) ಶ್ರೀಮತಿ ದಾಸರ ಪದ್ಮಾವತಮ್ಮ ಒಂದು ಗಾದ್ರೆಜ್ ಬೀರು ದಾನವಾಗಿ ಕೊಟ್ಟಿದ್ದಾರೆ.

೨) ಶ್ರೀ ವಾಸು ಅವರು ಒಂದು ಕಬ್ಬಿಣದ ಟೇಬಲ್ಲು ದಾನವಾಗಿ ಕೊಟ್ಟಿದ್ದಾರೆ.

೩) ಕಾರ್ಮಿಕ ಲೋಕ ಎಚ್.ಎ.ಎಲ್. ಇವರಿಂದ ಕನ್ನಡ ಅಂಕಿಗಳ ಗೋಡೆಗಡಿಯಾರ.

ಕನ್ನಡಕ್ಕೆ ಸಂಪುಟ ದರ್ಜೆ ಸಚಿವ ಸ್ಥಾನ: ಕಂಬಾರ ಒತ್ತಾಯ

ಬೆಂಗಳೂರು, ಜು. ೬ – ಕರ್ನಾಟಕದಲ್ಲಿ ಕನ್ನಡಕ್ಕೆ ಸಚಿವ ಸಂಪುಟದಲ್ಲಿ ಸ್ಥಾನವಿಲ್ಲ, ಇದು ವಿಷಾದಕರ ಸಂಗತಿ. ಹಾಗಾಗಿ ಕನ್ನಡಕ್ಕೆ ಸಂಪುಟ ದರ್ಜೆ ಸಚಿವ ಸ್ಥಾನ ನೀಡುವಂತೆ ವಿಧಾನ ಪರಿಷತ್ ಸದಸ್ಯ ಹಾಗೂ ಹಿರಿಯ ಸಾಹಿತಿ ಡಾ॥ ಚಂದ್ರಶೇಖರ ಕಂಬಾರ ಒತ್ತಾಯಿಸಿದರು.

ತಮಿಳುನಾಡಿನಲ್ಲಿ ತಮಿಳಿಗೆ, ಮಹಾರಾಷ್ಟ್ರದಲ್ಲಿ ಮರಾಠಿಗೆ ಸಚಿವ ಸಂಪುಟದಲ್ಲಿ ಸ್ಥಾನವಿದೆ. ಆದರೆ ಕರ್ನಾಟಕದಲ್ಲಿ ಕನ್ನಡ ಸಂಪುಟವಿಲ್ಲ ಎಂದು ವಿಷಾದಿಸಿದರು. ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಕನ್ನಡ ಜನಶಕ್ತಿ ಹಾಗೂ ಕನ್ನಡ ಗೆಳೆಯರ ಬಳಗ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಕನ್ನಡಕ್ಕೆ ಸಂಪುಟ ದರ್ಜೆ ಸಚಿವ ಸ್ಥಾನ ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

■ *ಸಂಯುಕ್ತ ಕರ್ನಾಟಕ, ೦೭-೦೭-೨೦೦೬*

ಪ್ರೊ॥ ಕ.ವೆಂ. ರಾಘವಾಚಾರ್ ಶತಮಾನೋತ್ಸವ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಮತ್ತು ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಗಳ ಸಂಯುಕ್ತ ಆಶ್ರಯದಲ್ಲಿ 'ಪ್ರೊ॥ ಕ.ವೆಂ. ರಾಘವಾಚಾರ್ಯ ಶತಮಾನೋತ್ಸವ' ಕಾರ್ಯಕ್ರಮ ಬಿ.ಎಂ.ಶ್ರೀ. ಕಲಾಭವನದಲ್ಲಿ ಈಚೆಗೆ ಯಶಸ್ವಿಯಾಗಿ ನಡೆಯಿತು:

ಬಿ.ಎಂ.ಶ್ರೀ. ಕಲಾಭವನದಲ್ಲಿ ಹಿರಿಯ ವಿದ್ವಾಂಸ ಪ್ರೊ॥ ಜಿ. ವೆಂಕಟಸುಬ್ಬಯ್ಯ ಸಮಾರಂಭ ಉದ್ಘಾಟಿಸಿ, ಕನ್ನಡ – ಕನ್ನಡ ನಿಘಂಟು ರಚನೆಯಲ್ಲಿ ರಾಘವಾಚಾರ್ಯರ ಕೊಡುಗೆ ಅಪಾರವಾಗಿದೆ. ಅವರು ಸುಲಭವಾಗಿ ಯಾವುದೇ ಶಬ್ದವನ್ನು ಪರಾಮರ್ಶೆಗೊಳಪಡಿಸದೇ ಒಪ್ಪಿಕೊಳ್ಳುತ್ತಿರಲಿಲ್ಲ. ಗ್ರೀಕ್ ಮತ್ತು ತಮಿಳು ಭಾಷೆಗಳಲ್ಲಿ ಅವರು ಉತ್ತಮ ವಿದ್ವತ್ತು ಹೊಂದಿದ್ದರು ಎಂದು ಸ್ಮರಿಸಿದರು.

ಅಧ್ಯಕ್ಷತೆ ವಹಿಸಿದ್ದ ಅನುವಾದ ಅಕಾಡೆಮಿ ಅಧ್ಯಕ್ಷ ಡಾ॥ ಪ್ರಧಾನ ಗುರುದತ್ತ ಅವರು, ರಾಘವಾಚಾರ್ಯರು ಬರೆದದ್ದು ಕಡಿಮೆಯಾದರೂ ಅದೆಲ್ಲ ಬಹುಕಾಲ ಉಳಿಯುವಂಥದ್ದು. ಆದ್ದರಿಂದ ಅವರು ಗ್ರೀಕ್ ಸಾಹಿತ್ಯದಿಂದ ಅನುವಾದ ಮಾಡಿರುವ ಎಲ್ಲ ನಾಟಕಗಳ ಸಮಗ್ರ ಸಂಕಲನ ಮತ್ತು ನಾಡಿಗೆ ಅವರು ಸಲ್ಲಿಸಿದ ಸೇವೆಯ ಬಗ್ಗೆ ಸಮಗ್ರ ಕೃತಿಗಳು ಹೊರಬರಬೇಕಾದ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷ ಡಾ॥ ಟಿ.ವಿ. ವೆಂಕಟಾಚಲಶಾಸ್ತ್ರಿ ಅವರು ಆಶಯ ಭಾಷಣ ಮಾಡಿದರು. ನಂತರ ನಡೆದ ವಿಚಾರಗೋಷ್ಠಿಯಲ್ಲಿ 'ರಾಘವಾಚಾರ್ಯ ಅವರ ಜೀವನ – ಸಾಧನೆ' ಕುರಿತಂತೆ ನಾಡಿನ ಹೆಸರಾಂತ ಸಾಹಿತಿಗಳು, ವಿದ್ವಾಂಸರು ತಮ್ಮ ವಿಚಾರಗಳನ್ನು ಮಂಡಿಸಿದರು.

ಹಿರಿಯ ವಿದ್ವಾಂಸ ಎನ್. ಬಸವಾರಾಧ್ಯ ಅವರು ಸಮಾರೋಪ ಭಾಷಣ ಮಾಡಿದರು. ಪ್ರತಿಷ್ಠಾನದ ಗೌರವ ಅಧ್ಯಕ್ಷ ಜಿ. ನಾರಾಯಣ ಅಧ್ಯಕ್ಷತೆ ವಹಿಸಿದ್ದರು. ಸಮಾರಂಭದಲ್ಲಿ ಕ.ವೆಂ. ರಾಘವಾಚಾರ್ಯ ದತ್ತಿನಿಧಿ ಸ್ಥಾಪಿಸಲು ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷರು ಪ್ರಾರಂಭಿಕ ಠೇವಣಿಯಾಗಿ ೫ ಸಾವಿರ ರೂ.ಗಳನ್ನು ಪ್ರತಿಷ್ಠಾನಕ್ಕೆ ನೀಡಿದರು. ಈ ನಿಧಿಗೆ ಉಳಿದ ಸಾಹಿತಿಗಳೂ ತಂತಮ್ಮ ಕಾಣಿಕೆಗಳನ್ನು ಸಲ್ಲಿಸಿದರು. ಬಿ.ಎಂ.ಶ್ರೀ. ಪ್ರತಿಷ್ಠಾನದ ವ್ಯವಸ್ಥಾಪಕ ಕಾರ್ಯದರ್ಶಿ ಎಸ್.ವಿ. ಶ್ರೀನಿವಾಸರಾವ್ ಸ್ವಾಗತಿಸಿದರು. ಬೆಳಗೆರೆ ಕೃಷ್ಣಶಾಸ್ತ್ರಿ, ಪ್ರೊ॥ ಎಂ.ಎಚ್. ಕೃಷ್ಣಯ್ಯ, ಪ್ರೊ॥ ಕ.ವೆಂ. ರಾಜಗೋಪಾಲ್ ಮುಂತಾದವರು ಉಪಸ್ಥಿತರಿದ್ದರು.

■ *ಉದಯವಾಣಿ, ೨೫-೦೮-೨೦೦೬*

ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸಂಪುಟ ದರ್ಜೆ ಸಚಿವರಾಗಿ ನಿಯುಕ್ತಗೊಂಡಿರುವ ಸನ್ಮಾನ್ಯ ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ ಅವರಿಗೆ ನಮ್ಮ ಹಾರ್ದಿಕ ಅಭಿನಂದನೆಗಳು ಹಾಗೂ ಹೃತ್ಪೂರ್ವಕ ಶುಭಾಶಯಗಳು. ಸಮಸ್ತ ಕನ್ನಡಿಗರ ಕೋರಿಕೆಯನ್ನು ಮನ್ನಿಸಿ ಈ ಮಂತ್ರಿ ಪದವಿಯನ್ನು ನೀಡಿರುವ ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಹೆಚ್.ಡಿ. ಕುಮಾರಸ್ವಾಮಿ ಅವರಿಗೆ ನಮ್ಮ ಹಾರ್ದಿಕ ಕೃತಜ್ಞತೆಗಳು.

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಬಗ್ಗೆ ಬಂದಿರುವ ಪತ್ರಿಕಾ ವರದಿಗಳು

(ಜುಲೈ ೨೦೦೬ರಿಂದ ಡಿಸೆಂಬರ್ ವರೆಗೆ)

ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ಎಂ.ಫಿಲ್. ತರಗತಿ ಆರಂಭ

ಬೆಂಗಳೂರು: ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ಎಂ.ಫಿಲ್. ಪದವಿ ತರಗತಿಯ ಉದ್ಘಾಟನಾ ಸಮಾರಂಭ ಇತ್ತೀಚೆಗೆ ನಡೆಯಿತು.

ಖ್ಯಾತ ವಿದ್ವಾಂಸರಾದ ಡಾ॥ ಟಿ.ವಿ. ವೆಂಕಟಾಚಲಶಾಸ್ತ್ರಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಪಿ.ಇ.ಎಸ್. ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಕಾರ್ಯದರ್ಶಿ ಪ್ರೊ॥ ಎಂ.ಆರ್. ದೊರೆಸ್ವಾಮಿ ಕಾರ್ಯಕ್ರಮ ಉದ್ಘಾಟಿಸಿದರು.

ವ್ಯವಸ್ಥಾಪಕ ಕಾರ್ಯದರ್ಶಿ ಎಸ್.ವಿ. ಶ್ರೀನಿವಾಸರಾವ್ ಸ್ವಾಗತಿಸಿದರು. ಎಂ.ಫಿಲ್. ವಿದ್ಯಾರ್ಥಿಗಳು ಕಾರ್ಯಕ್ರಮ ನಡೆಸಿಕೊಟ್ಟರು. ನಗರ ಪಾಲಿಕೆ ಸದಸ್ಯ ಸತ್ಯನಾರಾಯಣ, ಅತಿಥಿ ಅಧ್ಯಾಪಕರಾದ ಡಾ॥ ಎಸ್.ವಿ. ಪ್ರಭಾವತಿ, ಡಾ॥ ಕೆ.ಪಿ. ಭಟ್, ಪ್ರೊ॥ ಮಧುಸೂದನ ಹಾಜರಿದ್ದರು.

■ *ಕರ್ಮವೀರ, ೨೫-೦೯-೨೦೦೬*

ಬಿ.ಎಂ.ಶ್ರೀ. ಪ್ರತಿಷ್ಠಾನಕ್ಕೆ ನೇಮಕ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಮತ್ತು ಸ್ನಾತಕೋತ್ತರ ಸಂಶೋಧನಾ ಕೇಂದ್ರದ ಅಧ್ಯಕ್ಷರಾಗಿ ಪ್ರೊ॥ ಚಿ. ಶ್ರೀನಿವಾಸರಾಜು ಆಯ್ಕೆಯಾಗಿದ್ದಾರೆ. ಇದುವರೆಗೆ ಡಾ॥ ಟಿ.ವಿ. ವೆಂಕಟಾಚಲಶಾಸ್ತ್ರಿ ಅಧ್ಯಕ್ಷರಾಗಿದ್ದರು. ಶ್ರೀನಿವಾಸರಾಜು ಕನ್ನಡ ಪ್ರಾಧ್ಯಾಪಕರಾಗಿ ಕ್ರೈಸ್ಟ್ ಕಾಲೇಜು ಕನ್ನಡ ಸಂಘದ ಸಂಚಾಲಕರಾಗಿ ಸೇವೆ ಸಲ್ಲಿಸಿದ್ದರು. ಹಲವು ನಾಟಕಗಳನ್ನು ರಚಿಸುವ ಮೂಲಕ ಸಾಹಿತ್ಯಿಕವಾಗಿಯೂ ಹೆಸರು ಗಳಿಸಿದವರು. ಪ್ರತಿಷ್ಠಾನದ ಆರನೇ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಶ್ರೀನಿವಾಸರಾಜು ಇನ್ನು ಮೂರು ವರ್ಷಗಳ ಕಾಲ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಾರೆ. ಗೌರವಾಧ್ಯಕ್ಷರಾಗಿ ಜಿ. ನಾರಾಯಣ, ಗೌರವ ಕಾರ್ಯದರ್ಶಿಯಾಗಿ ಪ್ರೊ॥ ನಾ. ಗೀತಾಚಾರ್ಯ, ವ್ಯವಸ್ಥಾಪಕ ಕಾರ್ಯದರ್ಶಿಯಾಗಿ ಎಸ್.ವಿ. ಶ್ರೀನಿವಾಸರಾವ್ ಮತ್ತು ಕೋಶಾಧಿಕಾರಿಯಾಗಿ ಎಸ್.ಟಿ. ರಾಧಾಕೃಷ್ಣ ತಮ್ಮ ಸೇವೆಯಲ್ಲಿ ಮುಂದುವರೆದಿದ್ದಾರೆ.

■ *ಕನ್ನಡ ಪ್ರಭ ೨೭-೧೦-೨೦೦೬*

ಭಾಷಾ ಸಮಸ್ಯೆ ಮೂಲ ಅರಿಯಿರಿ

ಬೆಂಗಳೂರು, ನ. ೫ – ನಾಡಿನ ಭಾಷೆ, ಸಂಸ್ಕೃತಿ ಸಮಸ್ಯೆ ಬಗೆಹರಿಸಲು ಅದರ ಮೂಲ ಅರಿಯುವುದು ಅವಶ್ಯ ಎಂದು ಸಂಶೋಧಕ ಡಾ॥ ಚಿದಾನಂದಮೂರ್ತಿ ಹೇಳಿದ್ದಾರೆ.

ಕನ್ನಡ ಗೆಳೆಯರ ಬಳಗ ಭಾನುವಾರ ಆಯೋಜಿಸಿದ್ದ ಕನ್ನಡ ತರಬೇತಿ ಶಿಬಿರದಲ್ಲಿ ಅವರು ಮಾತನಾಡಿದರು.

ಪತ್ರಕರ್ತ ಈಶ್ವರ ದೈತೋಟ ಮಾತನಾಡಿ, ಆಧುನಿಕ ಯುಗದಲ್ಲಿ ಕನ್ನಡಿಗರಿಂದಲೇ ಕನ್ನಡ ನಿರ್ಲಕ್ಷ್ಯಕ್ಕೊಳಗಾಗಿರುವುದು ದುರಂತ ಎಂದು ವಿಷಾದಿಸಿದರು.

ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಜಿ. ನಾರಾಯಣ ಮಾತನಾಡಿ, ಸುವರ್ಣ ಕರ್ನಾಟಕ ನಿಮಿತ್ತ, ವರ್ಷವಿಡೀ ಕನ್ನಡಪರ ಕಾರ್ಯಕ್ರಮಗಳನ್ನು ನಡೆಸಲು ಸರಕಾರ ತೀರ್ಮಾನಿಸಿದೆ. ಆದರೆ ಕೇವಲ ಕಲೆ, ಸಂಸ್ಕೃತಿ ಪ್ರದರ್ಶನಕ್ಕೆ ಒತ್ತು ನೀಡಿ ಕನ್ನಡ ಉಳಿಸುತ್ತೇವೆ ಎಂಬುದರಲ್ಲಿ ಹುರುಳಿಲ್ಲ ಎಂದರು.

■ *ವಿಜಯ ಕರ್ನಾಟಕ, ೦೬-೧೧-೨೦೦೬*

ಭಾಷೆ ಕಲಿಕೆ ಐಚ್ಛಿಕ ಆಗಿರಲಿ: ಚಂಪಾ

ಬೆಂಗಳೂರು: 'ಮಗುವಿಗೆ ಗೊತ್ತಿರುವ ಭಾಷೆಯ ಮೇಲೆ ಪ್ರಭುತ್ವ ಸಾಧಿಸಿದ ನಂತರ, ಅವಶ್ಯವೆನಿಸಿದರೆ ಮಾತ್ರ ಬೇರೆ ಭಾಷೆ ಕಲಿಸಬೇಕು. ಆದರೆ ಅದು ಐಚ್ಛಿಕವಾಗಿರಬೇಕೆ ಹೊರತು ಕಡ್ಡಾಯವಾಗಿರಬಾರದು' ಎಂದು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಪ್ರೊ॥ ಚಂದ್ರಶೇಖರ ಪಾಟೀಲ ಭಾನುವಾರ ಪ್ರತಿಪಾದಿಸಿದರು.

ಬಿ.ಎಂ.ಶ್ರೀ. ಪ್ರತಿಷ್ಠಾನ, ಕನ್ನಡ ಗೆಳೆಯರ ಬಳಗ ಹಾಗೂ ಕನ್ನಡ ಜನಶಕ್ತಿ ಸಂಘಟನೆಗಳ ಸಂಯುಕ್ತ ಆಶ್ರಯದಲ್ಲಿ ಸುವರ್ಣ ಕರ್ನಾಟಕ ಚಿಂತನ ಮಾಲೆ ಕಾರ್ಯಕ್ರವಾಗಿ ನಡೆದ 'ಪ್ರಾಥಮಿಕ ಶಿಕ್ಷಣದಲ್ಲಿ ಇಂಗ್ಲಿಷ್' ಚಿಂತನಗೋಷ್ಠಿ ಉದ್ದೇಶಿಸಿ ಅವರು ಮಾತನಾಡಿದರು.

ಪ್ರಜಾವಾಣಿ, ೨೭-೧೧-೨೦೦೬

ವಿಚಾರಗೋಷ್ಠಿ

ಬಿ.ಎಂ.ಶ್ರೀ. ಪ್ರತಿಷ್ಠಾನ ವತಿಯಿಂದ ಇಂದು (ನ. ೧೯) ಸಂಜೆ ೪ ಗಂಟೆಗೆ ಬಿ.ಎಂ.ಶ್ರೀ. ಕಲಾಭವನದ ಎಂ.ವಿ. ಸೀತಾರಾಮಯ್ಯ ಸಭಾಂಗಣದಲ್ಲಿ ತೀ.ನಂ.ಶ್ರೀ. ಶತಮಾನೋತ್ಸವ ಪ್ರಯುಕ್ತ 'ಕನ್ನಡ ಭಾಷಾವಿಜ್ಞಾನ ಮತ್ತು ನಿಘಂಟು, ವಿಷಯವಾಗಿ ವಿಚಾರಗೋಷ್ಠಿ ನಡೆಯಲಿದೆ.

ಹಿರಿಯ ವಿದ್ವಾಂಸ ಎನ್. ಬಸವಾರಾಧ್ಯ ಅವರು ಸಮಾರಂಭ ಉದ್ಘಾಟಿಸಲಿದ್ದು, ಮತ್ತೊಬ್ಬ ವಿದ್ವಾಂಸ ಪ್ರೊ॥ ಎಂ.ಎಚ್. ಕೃಷ್ಣಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ. ಗೋಷ್ಠಿಯಲ್ಲಿ 'ತೀ.ನಂ.ಶ್ರೀ. ಜೀವನ ವ್ಯಕ್ತಿತ್ವ' ಕುರಿತು ಪ್ರೊ॥ ತೀ.ಶ್ರೀ. ನಾಗಭೂಷಣ, 'ಕನ್ನಡ ನಿಘಂಟು ಕ್ಷೇತ್ರ ಮುನ್ನೋಟ' ಕುರಿತು ಡಾ॥ ಕೆ.ವಿ. ನಾರಾಯಣ ಮತ್ತು 'ಕನ್ನಡ ಭಾಷಾ ವಿಜ್ಞಾನ ಕ್ಷೇತ್ರದ ಮುನ್ನೋಟ' ಕುರಿತಾಗಿ ಡಾ॥ ಕೆ.ಪಿ. ಭಟ್ ಅವರು ಉಪನ್ಯಾಸ ನೀಡಲಿದ್ದಾರೆ.

■ *ಉದಯವಾಣಿ, ೧೯-೧೧-೨೦೦೬*

ತಳಕಿನಲ್ಲಿ ತ.ಸು. ಶಾಮರಾಯರ ಜನ್ಮಶತಮಾನೋತ್ಸವ

ಚಳ್ಳಕೆರೆ: ತಳಕು ಗ್ರಾಮದಲ್ಲಿ ಡಾ॥ ತ.ಸು. ಶಾಮರಾಯರ ಜನ್ಮಶತಮಾನೋತ್ಸವ ಹಾಗೂ ಸುವರ್ಣ ಕನ್ನಡ ರಾಜ್ಯೋತ್ಸವ ಸಂಭ್ರಮದಿಂದ ನಡೆಯಿತು.

ಸಮಾರಂಭ ಉದ್ಘಾಟಿಸಿದ ಖ್ಯಾತ ಸಾಹಿತಿ ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷ ಪ್ರೊ॥ ಚಿ. ಶ್ರೀನಿವಾಸರಾಜು, ಮಕ್ಕಳಿಗೆ ಶುದ್ಧ ಕನ್ನಡ ಕಲಿಸಿ, ಹೆಸರಾದ ಕನ್ನಡವನ್ನು ಉಸಿರಾಗಿಸಿ ಎಂದು ಕರೆ ನೀಡಿದರು.

ಮುಖ್ಯ ಅತಿಥಿಯಾಗಿದ್ದ ವಿಧಾನಸಭೆ ಉಪಸಭಾಪತಿ ಎನ್.ವೈ. ಗೋಪಾಲಕೃಷ್ಣ, 'ನಾಡಿನ ಸಾಹಿತ್ಯ ಹಾಗೂ ಸಾಂಸ್ಕೃತಿಕ ಲೋಕವನ್ನು ಶ್ರೀಮಂತಗೊಳಿಸಿದ ತಳಕಿನ ವೆಂಕಣ್ಣಯ್ಯ, ತರಾಸು, ತ.ಸು. ಶ್ಯಾಮರಾಯರಂತ ದಿಗ್ಗಜರ ಜನ್ಮಶತಮಾನೋತ್ಸವವನ್ನು ಸರ್ಕಾರ ಆಚರಿಸಬೇಕು' ಎಂದು ಆಗ್ರಹಿಸಿದ್ದಾರೆ. ಶತಮಾನೋತ್ಸವ ಆಚರಣೆ ತಳಕಿಗೆ ಮಾತ್ರ ಸೀಮಿತವಾಗದೆ ಇಡೀ ರಾಜ್ಯದಾದ್ಯಂತ ಆಚರಿಸುವಂತೆ ಆಗಬೇಕು. ಸರ್ಕಾರ ಈ ನಿಟ್ಟಿನಲ್ಲಿ ಕ್ರಮಕೈಗೊಳ್ಳಬೇಕು ಎಂದರು. ಶಾಸಕ ಡಿ. ಸುಧಾಕರ್ ಅಧ್ಯಕ್ಷತೆ ವಹಿಸಿ, ತಳಕಿನ ವೆಂಕಣ್ಣಯ್ಯ ಸ್ಮಾರಕ ಭವನ ಪುನರುಜ್ಜೀವನಕ್ಕೆ ಹಾಗೂ ಗ್ರಾಮದ ಪ್ರಮುಖ ಸ್ಥಳಗಳಲ್ಲಿ ತರಾಸು, ತ.ಸು. ಶಾಮರಾಯ, ಟಿ.ಎಸ್. ವೆಂಕಣ್ಣಯ್ಯ ಅವರ ಪುತ್ಥಳಿ ಸ್ಥಾಪನೆಗೆ ನೆರವು ನೀಡುವ ಭರವಸೆ ನೀಡಿದರು. ಮುಖ್ಯ ಅತಿಥಿಗಳಾಗಿ ಶ್ರೀನಿವಾಸರಾವ್, ಜಿ.ಪಂ. ಸದಸ್ಯ ಹನುಮಂತ ರೆಡ್ಡಿ, ತಾ.ಪಂ. ಸದಸ್ಯ ರವಿಕುಮಾರ್, ಚಂದ್ರಣ್ಣ, ಡಾ॥ ನಾಗೇಂದ್ರ ನಾಯಕ್, ತ.ಸು. ಶಾಮರಾಯರ ಬಂಧುಗಳಾದ ಟಿ.ಕೆ. ವೆಂಕಣ್ಣಯ್ಯ ಆಗಮಿಸಿದ್ದರು. ಕಾರ್ಗಿಲ್ ಯುದ್ಧದಲ್ಲಿ ಪಾಲ್ಗೊಂಡಿದ್ದ ಯೋಧ ತಿಪ್ಪೇಸ್ವಾಮಿ ಸೇರಿದಂತೆ ಹಲವರನ್ನು ಸನ್ಮಾನಿಸಲಾಯಿತು. ತಳಕಿನ ವೆಂಕಣ್ಣಯ್ಯ, ತರಾಸು, ತ.ಸು. ಶಾಮರಾಯರ, ಭುವನೇಶ್ವರಿ ಭಾವಚಿತ್ರಗಳ ಮೆರವಣಿಗೆ ಮಾಡಲಾಯಿತು. ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ತಳಕಿನ ವೆಂಕಣ್ಣಯ್ಯ ಯುವಕ ಸಂಘ, ತರಾಸು ಯುವಕ ಸಂಘ, ತಳಕು ಕನ್ನಡ ರಕ್ಷಣಾ ವೇದಿಕೆ, ತಾಲ್ಲೂಕು ಕಸಾಪ ಆಶ್ರಯದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

■ *ಕನ್ನಡ ಪ್ರಭ, ೧೯-೧೨-೨೦೦೬*

ತೀ.ನಂ. ಶ್ರೀಕಂಠಯ್ಯನವರ ಸೇವೆ ನಾಡಿನ ಪುಣ್ಯವಿದ್ದಂತೆ

ಚಿತ್ರದುರ್ಗ: ಪ್ರೊ॥ ತೀ.ನಂ. ಶ್ರೀಕಂಠಯ್ಯನವರು ಒಬ್ಬ ವಿದ್ವಾಂಸರಾಗಿ ಕನ್ನಡಕ್ಕೆ ಸೇವೆ ಸಲ್ಲಿಸಿದ್ದು ಕನ್ನಡ ನಾಡು, ಕನ್ನಡಿಗರ ಪುಣ್ಯ ಎಂದು ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಅಧ್ಯಕ್ಷ ಪ್ರೊ॥ ಚಿ. ಶ್ರೀನಿವಾಸರಾಜು ಅಭಿಪ್ರಾಯಪಟ್ಟರು.

ಅವರು ಚಿತ್ರದುರ್ಗ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಹಾಗೂ ಬೆಂಗಳೂರಿನ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ವತಿಯಿಂದ ನಗರದ ಐ.ಎಂ.ಎ. ಹಾಲ್‌ನಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಶತಮಾನೋತ್ಸವ ಸಮಾರಂಭ ಮತ್ತು ಬಿ.ಎಂ.ಶ್ರೀ. ಕನ್ನಡ ಜಾಗೃತಿ ಹಸ್ತಪ್ರತಿ ಪ್ರದರ್ಶನ ಸಮಾರಂಭದಲ್ಲಿ ತೀ.ನಂ.ಶ್ರೀ. ಕುರಿತು ಉಪನ್ಯಾಸ ನೀಡಿದರು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಕಾರ್ಯದರ್ಶಿ ಎಸ್.ವಿ. ಶ್ರೀನಿವಾಸರಾವ್ ಪ್ರಾಸ್ತಾವಿಕವಾಗಿ ಮಾತನಾಡಿದರು. ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ॥ ದೊಡ್ಡಮಲ್ಲಯ್ಯ ಅಧ್ಯಕ್ಷತೆ ವಹಿಸಿದ್ದರು.

ವೇದಿಕೆಯಲ್ಲಿ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಪ್ರೊ॥ ಗೀತಾಚಾರ್ಯ, ಪ್ರೊ॥ ಎಚ್.ವಿ. ಶ್ರೀನಿವಾಸಶರ್ಮ ಹಾಗೂ ಮುಖ್ಯ ಅತಿಥಿಗಳಾಗಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಎಂ. ವೀರೇಶ್ ಉಪಸ್ಥಿತರಿದ್ದರು.

■ *ಪ್ರಜಾ ಪ್ರಗತಿ, ೧೮-೧೨-೨೦೦೬)*

ಬೆಂಗಳೂರಿನ ಬಿ.ಎಂ.ಶ್ರೀ. ಕಲಾಭವನದ ಎಂ.ವಿ.ಸೀ. ಸಭಾಂಗಣದಲ್ಲಿ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನವು ಗುರುವಾರ ಹಮ್ಮಿಕೊಂಡಿದ್ದ 'ಸಂಶೋಧನ ದಿನ' ಕಾರ್ಯಕ್ರಮದಲ್ಲಿ ಸಂಶೋಧಕ ಡಾ॥ ಎಚ್.ಎಸ್. ಗೋಪಾಲರಾವ್ ಮತ್ತು ಅವರ ಪತ್ನಿ ಸೀತಾಲಕ್ಷ್ಮಿ ಅವರನ್ನು ಸನ್ಮಾನಿಸಲಾಯಿತು. ಡಾ॥ ಶೇಷಶಾಸ್ತ್ರಿ, ಕನ್ನಡ ಗೆಳೆಯರ ಬಳಗದ ರಾ.ನಂ. ಚಂದ್ರಶೇಖರ, ಪ್ರೊ॥ ಚಿ. ಶ್ರೀನಿವಾಸರಾಜು, ಪ್ರೊ॥ ಎಸ್.ಎಲ್. ಶ್ರೀನಿವಾಸಮೂರ್ತಿ ಮತ್ತು ಸಾಹಿತಿ ಡಾ॥ ಎಂ. ಚಿದಾನಂದಮೂರ್ತಿ ಉಪಸ್ಥಿತರಿದ್ದರು.

■ *ಪ್ರಜಾವಾಣಿ*

ಬೆಂಗಳೂರಿನ ಬಿ.ಎಂ.ಶ್ರೀ. ಕಲಾಭವನದಲ್ಲಿ ಸೋಮವಾರ ನಡೆದ 'ಇಂಗ್ಲಿಷ್ ಗೀತೆಗಳು' ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಸಾಹಿತಿಗಳಾದ ರಹಮತ್ ತರೀಕೆರೆ, ಡಾ॥ ಟಿ.ವಿ. ವೆಂಕಟಾಚಲಶಾಸ್ತ್ರಿ, ಹಂಪಿ ಕನ್ನಡ ವಿವಿ ಕುಲಪತಿ ಬಿ.ಎ. ವಿವೇಕ ರೈ ಸಾಹಿತಿಗಳಾದ ಡಾ॥ ಯು.ಆರ್. ಅನಂತಮೂರ್ತಿ, ಪ್ರೊ॥ ಎಲ್.ಎಸ್. ಶೇಷಗಿರಿರಾವ್, ಹಂಪಿ ವಿ.ವಿ. ಕನ್ನಡ ಅಧ್ಯಯನ ವಿಭಾಗದ ಮುಖ್ಯಸ್ಥ ವೆಂಕಟೇಶ ಇಂದ್ವಾಡಿ ಭಾಗವಹಿಸಿದ್ದರು.

■ *ಪ್ರಜಾವಾಣಿ, ೧೪-೦೯-೨೦೦೬*

ಅಭಿನಂದನೆಗಳು

೧) **ಡಾ॥ ಸಿದ್ಧಲಿಂಗಯ್ಯ,** ಅಧ್ಯಕ್ಷರು ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಸರ್ಕಾರ ಖ್ಯಾತ ಕವಿ. ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರು. ಇವರನ್ನು ಕರ್ನಾಟಕ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ೩ ವರ್ಷ ಅವಧಿಗೆ ನೇಮಕ ಮಾಡಿದೆ. ಇವರು ಈಗಾಗಲೇ ಎರಡು ಅವಧಿಗೆ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

೨) **ಟಿಯೆಸ್ಸಾರ್ ಪ್ರಶಸ್ತಿ:** ಖ್ಯಾತ ಪತ್ರಕರ್ತ ಶ್ರೀ ಸುರೇಂದ್ರದಾನಿ (ಜನನ ೧೯೨೫) ಅವರಿಗೆ ಕರ್ನಾಟಕ ಸರ್ಕಾರವು ೨೦೦೬ನೇ ಸಾಲಿನ ಟಿಯೆಸ್ಸಾರ್ ಪ್ರಶಸ್ತಿ ನೀಡಿ ಪುರಸ್ಕರಿಸಿದೆ.

೩) **ಖಾದ್ರಿಶಾಮಣ್ಣ ಪ್ರಶಸ್ತಿ** ಸಂಯುಕ್ತ ಕರ್ನಾಟಕದ ನಿವೃತ್ತ ಪತ್ರಕರ್ತ ಶ್ರೀ ಎನ್.ವಿ. ಜೋಶಿ ಅವರಿಗೆ ಖಾದ್ರಿ ಶಾಮಣ್ಣ ಪ್ರಶಸ್ತಿ ನೀಡಿ ಪುರಸ್ಕರಿಸಿದೆ.

೪) **ಅ.ನ.ಕೃ. ನಿರ್ಮಾಣ್ ಪ್ರಶಸ್ತಿ** ರಾಷ್ಟ್ರಕವಿ ಡಾ॥ ಜಿ.ಎಸ್. ಶಿವರುದ್ರಪ್ಪ ಅವರಿಗೆ ೨೦೦೬ನೇ ಸಾಲಿನ ಈ ಪ್ರಶಸ್ತಿಯನ್ನು ನೀಡಲಾಗಿದೆ.

೫) **ದೇವರಾಜ್ ಅರಸ್ ಪ್ರಶಸ್ತಿ**
ರಾಜ್ಯ ಸರ್ಕಾರ ೨೦-೦೮-೨೦೦೬ರಂದು ನಾಡೋಜ ಡಾ॥ ನಿಸಾರ್ ಅಹಮದ್ ಅವರಿಗೆ ದೇವರಾಜ್ ಅರಸ್ ಪ್ರಶಸ್ತಿ ನೀಡಿ ಪುರಸ್ಕರಿಸಿದೆ.

೬) **ರೈಟ್ ಲೈವ್ಲಿ ಹುಡ್ ಪ್ರಶಸ್ತಿ** ದಲಿತರು ಮತ್ತು ಕೊಳಗೇರಿ ಮಹಿಳೆಯರ ಕಲ್ಯಾಣ ಹಾಗೂ ಹಕ್ಕುಗಳಿಗಾಗಿ ನಿರಂತರ ಹೋರಾಟ ನಡೆಸಿರುವ ಖ್ಯಾತ ಸಮಾಜ ಸೇವಕಿ, ಶ್ರೀಮತಿ ರೂತ್ ಮನೋರಮಾ (೧೯೫೨ ಜನನ) ಅವರಿಗೆ ಈ ಅಂತಾರಾಷ್ಟ್ರೀಯ ಪ್ರಶಸ್ತಿ ಪ್ರಾಪ್ತವಾಗಿದೆ. ಶ್ರೀಮತಿ ರೂತ್ ಮನೋರಮಾ ಅವರು ಸಮಾಜ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವೀಧರರು.

೭) **ರಾಷ್ಟ್ರಕವಿ ಪ್ರಶಸ್ತಿ** ರಾಜ್ಯ ಸರ್ಕಾರವು ಈ ಪ್ರತಿಷ್ಠಿತ ಪ್ರಶಸ್ತಿಯನ್ನು ದಿನಾಂಕ ೦೧-೧೧-೨೦೦೬ರಂದು ಕನ್ನಡದ ಶ್ರೇಷ್ಠಕವಿ ಡಾ॥ ಜಿ.ಎಸ್. ಶಿವರುದ್ರಪ್ಪ ಅವರಿಗೆ ನೀಡಿ ಗೌರವಿಸಿದೆ. (ಈ ಪ್ರಶಸ್ತಿಯನ್ನು ಹಿಂದೆ ಪಡೆದಿದ್ದವರು. ಡಾ॥ ಗೋವಿಂದ ಪೈ, ಡಾ॥ ಕುವೆಂಪು)

೮) **ಹಂಪೆ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ – ೨೦೦೬** ಕವಿ ಕಯ್ಯಾರ ಕಿಞ್ಞಣ್ಣ ರೈ, ಡಾ॥ ಸರೋಜಿನಿ ಮಹಿಷಿ, ಜಾನಪದ ತಜ್ಞ ಮುದೇನೂರು ಸಂಗಣ್ಣ, ಡಾ॥ ಹಂಪ ನಾಗರಾಜಯ್ಯ, ದರೋಜಿ ಈರಮ್ಮ ಅವರಿಗೆ ಈ ಪ್ರಶಸ್ತಿ ಸಂದಿವೆ (೦೪-೧೨-೨೦೦೬)

೯) **ಚದುರಂಗ ಪ್ರಶಸ್ತಿ:** ಖ್ಯಾತ ಕಾದಂಬರಿಕಾರ ಕುಂ. ವೀರಭದ್ರಪ್ಪ ಅವರಿಗೆ ಈ ಪ್ರಶಸ್ತಿ ನೀಡಲಾಗಿದೆ. (೨೧-೧೨-೨೦೦೬)

೧೦) **ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ:** ಖ್ಯಾತ ವಿಮರ್ಶಕ, ಹಂಪೆ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಡಾ॥ ಎಂ.ಎಂ. ಕಲಬುರ್ಗಿ ಅವರ 'ಮಾರ್ಗ – ೪' ಕೃತಿಗೆ (೨೦೦೬) ನೇ ಸಾಲಿನ ಪ್ರಶಸ್ತಿ ಸಂದಿದೆ.

೧೧) ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ೭೩ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಾಡೋಜ ನಿಸಾರ್ ಅಹಮದ್ ಅವರ ಅಧ್ಯಕ್ಷತೆಯಲ್ಲಿ ಶಿವಮೊಗ್ಗದಲ್ಲಿ ಡಿಸೆಂಬರ್ ೨೧ರಿಂದ ೨೩ರ ವರೆಗೆ ನಡೆಯಿತು.

೧೨) **ಪಿಹೆಚ್.ಡಿ. ಪದವಿ** ಮೈಸೂರು ವಿಶ್ವವಿದ್ಯಾನಿಲಯವು ಶ್ರೀ ಕೆ.ಆರ್. ಕಮಲೇಶ್ ಅವರು ರಚಿಸಿರುವ ಮಹಾಪ್ರಬಂಧ 'ಚಿಕ್ಕ ನಾಯ್ಕನಹಳ್ಳಿ ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಧ್ಯಯನ'ಕ್ಕೆ ಪಿ.ಹೆಚ್.ಡಿ. ನೀಡಿ ಪುರಸ್ಕರಿಸಿದೆ. ಶ್ರೀಯುತರು ಉಪಮುಖ್ಯಮಂತ್ರಿಗಳ ಕಛೇರಿಯಲ್ಲಿ ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು ಖ್ಯಾತ ಲೇಖಕರೂ ಹೌದು.

೧೩) **ದಿನಕರ ದೇಸಾಯಿ ಪ್ರಶಸ್ತಿ** ಡಾ॥ ದಿನಕರ ದೇಸಾಯಿ ಸ್ಮಾರಕ ಪ್ರತಿಷ್ಠಾನ ನೀಡಿರುವ ಈ ಕಾವ್ಯ ಪ್ರಶಸ್ತಿ ಈ ಬಾರಿ, ಸಾಹಿತಿ ಜರಗನಹಳ್ಳಿ ಶಿವಶಂಕರ್ ಅವರಿಗೆ ಪ್ರಾಪ್ತವಾಗಿದೆ. ದಿನಕರ ದೇಸಾಯಿಯವರ ೯೮ನೇ ಜನ್ಮದಿನದಂದು ಸೆಪ್ಟಂಬರ್ ೧೦, ೨೦೦೬ರಂದು ಅಂಕೋಲದಲ್ಲಿ ನಡೆದ ಸಮಾರಂಭದಲ್ಲಿ ಪ್ರಶಸ್ತಿ ನೀಡಲಾಯಿತು.

೧೪) **ಅಂತಾರಾಷ್ಟ್ರೀಯ ಮಹಿಳಾ ವರ್ಷದ ದತ್ತಿ ಪ್ರಶಸ್ತಿ** ಕನ್ನಡ ಸಾಹಿತ್ಯ ಪರಿಷತ್ತು ನೀಡುವ ಈ ದತ್ತಿನಿಧಿ ಪ್ರಶಸ್ತಿಗೆ, ಖ್ಯಾತ ಲೇಖಕಿ ಸುಧಾಮೂರ್ತಿ ಅವರಿಗೆ ಸಂದಿದೆ.

೧೫) **ಪ್ರೊ॥ ನಾ. ಗೀತಾಚಾರ್ಯ** ಅಸುಂಡಿ ಹುದ್ದಾರ ಕೃಷ್ಣರಾವ್ ದತ್ತಿನಿಧಿ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಕೃತಿ 'ತುಳಸೀ ರಾಮದಾಸರು'

೧೫) **ನಿರಂಜನ ಪ್ರಶಸ್ತಿ** ಹಿರಿಯ ಸಾಹಿತಿ ಡಾ॥ ಸುಮತೀಂದ್ರ ನಾಡಿಗರಿಗೆ ಪುತ್ತೂರಿನ ವಿವೇಕಾನಂದ ಮಹಾವಿದ್ಯಾಲಯದ ಶಿವರಾಮ ಕಾರಂತ ಅಧ್ಯಯನ ಕೇಂದ್ರದ ಆಶ್ರಯದಲ್ಲಿ ನಡೆದ ಸಮಾರಂಭದಲ್ಲಿ ಈ ಪ್ರಶಸ್ತಿ ನೀಡಿ ಗೌರವಿಸಲಾಯಿತು. (೦೬-೦೯-೨೦೦೬)

೧೬) **ಪ್ರೊ॥ ಎಂ.ಎಚ್. ಕೃಷ್ಣಯ್ಯ – ೭೦** ದಿನಾಂಕ ೨೧-೦೭-೨೦೦೬ರಂದು ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಅವರಿಗೆ ಗೌರವಾರ್ಪಣೆ ಜೊತೆಗೆ ಅವರ 'ಅವಲೋಕನ' ಗ್ರಂಥದ ಲೋಕಾರ್ಪಣೆ ಸಹ ನಡೆಯಿತು. ಪ್ರೊ॥ ಎಲ್.ಎಸ್. ಶೇಷಗಿರಿರಾವ್ ಅಧ್ಯಕ್ಷತೆ ವಹಿಸಿದ್ದರು.

೧೭) **ಹಂಪನಾ – ೭೦**
ದಿನಾಂಕ ೦೮-೧೦-೨೦೦೬ರಂದು ಜೈನ ಸಭಾಂಗಣದಲ್ಲಿ ಪ್ರಜ್ಞಾ ಸಾಂಸ್ಕೃತಿಕ ವೇದಿಕೆ ಏರ್ಪಡಿಸಿದ ಗೌರವ ಸಂಭ್ರಮ ಕಾರ್ಯಕ್ರಮ ದಲ್ಲಿ ಅವರನ್ನು ಸನ್ಮಾನಿಸಲಾಯಿತು. ಡಾ॥ ಜಿ.ಎಸ್. ಶಿವರುದ್ರಪ್ಪ ಅಧ್ಯಕ್ಷತೆ ವಹಿಸಿದ್ದರು.

ಮೇಲ್ಕಂಡ ಎಲ್ಲಾ ಸನ್ಮಾನ್ಯರುಗಳಿಗೆ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಹಾರ್ದಿಕ ಅಭಿನಂದನೆಯೊಡನೆ ಶುಭಾಶಯ ಕೋರುತ್ತದೆ.

❑

ಶ್ರದ್ಧಾಂಜಲಿ

೧) **ರಾಜಾರಾವ್** (ಜನನ ೦೮-೧೧-೧೯೦೮) **'ಕಾಂತಾಪುರ'** ಕಾದಂಬರಿ ಖ್ಯಾತಿಯ ಇಂಗ್ಲಿಷ್ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಗಳನ್ನು ನೀಡಿರುವ ಕರ್ನಾಟಕದ ಹಾಸನದಲ್ಲಿ ಜನಿಸಿದ್ದ ಸಾಹಿತಿ ರಾಜಾರಾವ್ ಅವರು ದಿನಾಂಕ ೦೮-೦೭-೨೦೦೬ರಂದು ಅಮೇರಿಕಾದ ಟೆಕ್ಸಾಸ್‌ನಲ್ಲಿ ನಿಧನರಾದರು. ಅವರಿಗೆ ೯೮ ವರ್ಷ ವಯಸ್ಸಾಗಿತ್ತು. ಇವರು ಇಂಗ್ಲೀಷಲ್ಲದೆ ಫ್ರೆಂಚ್‌ನಲ್ಲೂ ಸಾಹಿತ್ಯ ರಚಿಸಿದ್ದರು. ಭಾರತ ಸರ್ಕಾರದ 'ಪದ್ಮಭೂಷಣ' ಪ್ರಶಸ್ತಿ ಅಲ್ಲದೆ ಪ್ರತಿಷ್ಠಿತ ನ್ಯೂ ಸ್ಟಾಡ್ಸ್ ಇಂಟರ್ ನ್ಯಾಷನಲ್ ಪ್ರೈಜ್ ಸಹ ಲಭಿಸಿತ್ತು. ಇವರು ರಚಿಸಿರುವ ಮುಖ್ಯ ಕೃತಿಗಳು – ಕಾಂತಾಪುರ, ವಿದರ್ ಇಂಡಿಯಾ, ದಿ ಸರ್ಪೆಂಟ್ ಅಂಡ್ ದಿ ರೋಪ್, ದಿ ಕ್ಯಾಟ್ ಅಂಡ್ ಶೇಕ್ಸ್‌ಫಿಯರ್, ಕಾಮ್ರೆಡ್ ಕಿರಿಲೋವ್, ಎಲೈಫ್ ಆಫ್ ಮಹಾತ್ಮಗಾಂಧಿ, ದಿ ಮೀನಿಂಗ್ ಆಫ್ ಇಂಡಿಯಾ ಮುಂತಾದ ಹತ್ತಾರು ಕೃತಿಗಳ ರಚಕರು.

೨) **ಸೂರ್ಯನಾರಾಯಣ ಚಡಗ:** (ಜನನ ೧೩-೦೪-೧೯೩೨ ಉಡುಪಿ ತಾಲ್ಲೂಕಿನ ಪಾಂಡೇಶ್ವರ). ಕನ್ನಡದ ಪ್ರಸಿದ್ಧ ಕಾದಂಬರಿಕಾರ, ವಾಗ್ಮಿ 'ನಂದನ' ಪ್ರಕಾಶನದ ಸಂಪಾದಕ. ಅವರು ದಿನಾಂಕ ೧೪-೧೧-೨೦೦೬ರಂದು ನಿಧನರಾದರು. ಇವರು ೨೫ಕ್ಕೂ ಹೆಚ್ಚು ಕಾದಂಬರಿಗಳನ್ನು ರಚಿಸಿದ್ದರು. ಇವರ 'ಮನೆತನ' ಕಾದಂಬರಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (೧೯೫೧ರಲ್ಲಿ) ಲಭಿಸಿತ್ತು. ಇತರ ಮುಖ್ಯ ಕೃತಿಗಳು: ಮನೆ ತುಂಬಿದ ಮಡದಿ, ಹೆಣ್ಣು – ಹೊನ್ನು – ಮಣ್ಣು, ಮನೆ ನಿನ್ನದು ಮನ ನನ್ನದು, ಬತ್ತದ ಕಣ್ಣೀರು, ಅಮರ ಸರಸ್ವತಿ, ಮನೆಗೆ ಬಂದ ಸೊಸೆ, ಮಾಂಗಲ್ಯ ದೇವರು ಮುಂತಾದವು. 'ಜಯದೇವಿ ತಾಯಿ', 'ನಗೆ ನಂದನ', 'ಕಾಮಧೇನು', 'ದಕ್ಷಿಣ ಕನ್ನಡದ ಬರಹಗಾರರು' ಇವರು ಸಂಪಾದಿಸಿರುವ ಬೃಹತ್ ಕೃತಿಗಳು.

೩) **ಜಾನಪದ ತಜ್ಞ ಡಾ॥ ಎಸ್.ಕೆ. ಕರೀಂಖಾನ್‌ರವರು** ದಿನಾಂಕ ೨೯-೦೭-೨೦೦೬ರಂದು ನಿಧನರಾದರು. ದಿನಾಂಕ ೧೨-೦೪-೧೯೦೮ರಂದು ಜನಿಸಿದ್ದ ಶ್ರೀಯುತರು ಕವಿಯಾಗಿ, ಜಾನಪದ ಸಾಹಿತಿಯಾಗಿ, ಸಿನಿಮಾ ಗೀತರಚನಕಾರರಾಗಿ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆಗಳನ್ನು ನೀಡಿದ್ದರು.

೪) **ಮತಿಘಟ್ಟ ಕೃಷ್ಣಮೂರ್ತಿ** ದಿನಾಂಕ ೧೦-೦೫-೧೯೧೩ರಂದು ಹಾಸನ ಜಿಲ್ಲೆಯ ಮತಿಘಟ್ಟದಲ್ಲಿ ಜನಿಸಿದ್ದ ಶ್ರೀಯುತರು ಮುಖ್ಯವಾಗಿ ಜಾನಪದ, ಪತ್ರಿಕೆ ಹಾಗೂ ಸಾಹಿತ್ಯ ಕ್ಷೇತ್ರಕ್ಕೆ ಅನನ್ಯ ಕೊಡುಗೆಗಳನ್ನು ನೀಡಿ ಸಂಪನ್ನಗೊಳಿಸಿದ್ದರು.

ಇವರು ರಚಿಸಿರುವ ಮುಖ್ಯ ಕೃತಿಗಳು: ಕಳಸಾಪುರದ ಹುಡುಗರು, ಸರ್ವೋದಯ ಪಚ್ಚೆತೆನೆ, ಕಲ್ಯಾಣಿ, ತ್ರಿಪದಿ ಛಂದಸ್ಸು, ಒಂದು ಸಮೀಕ್ಷೆ, ನಾಡ ಪದಗಳು, ನಮ್ಮ ಹಳ್ಳಿಯ ಹಾಡುಗಳು, ಗೀತೆಗಳು, ಶಕುನದ ಹಕ್ಕಿ ಮತ್ತು ಇತರ ಜನಪದ ಕಥೆಗಳು, ಕನ್ನಡ ಜಾನಪದ ಸಾಹಿತ್ಯ ಭಂಡಾರ (ಇವಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ ಲಭಿಸಿದೆ (೧೯೭೫)) ಇವರು ಬೆಂಗಳೂರಿನಲ್ಲಿ ದಿನಾಂಕ ೨೭-೦೭-೨೦೦೬ರಂದು ಮರಣ ಹೊಂದಿದರು.

೫) **ಎಚ್.ಜಿ. ರಾಧಾದೇವಿ :** ಕೋಲಾರ ಜಿಲ್ಲೆಯ ಖ್ಯಾತ ಕಾದಂಬರಿಗಾರ್ತಿ ಎಚ್.ಜಿ. ರಾಧಾದೇವಿಯವರು ರಾಯಚೂರಿನಲ್ಲಿ ದಿನಾಂಕ ೦೯-೧೧-೨೦೦೬ರಂದು ನಿಧನರಾದರು. ಅವರಿಗೆ ೫೫ ವರ್ಷವಾಗಿತ್ತು. ಇವರು ೩೦ಕ್ಕೂ ಹೆಚ್ಚು ಕಾದಂಬರಿಗಳನ್ನು ರಚಿಸಿದ್ದಾರೆ. ಮುಖ್ಯವಾದವುಗಳು: ಕತ್ತಲಲ್ಲಿ ಕಂಡ ಮಿಂಚು; ಸೌಭಾಗ್ಯ ಸಂಪದ, ಸಪ್ತವರ್ಣ ಮಿನುಗಿತು; ಚೆಲ್ಲದ ಪನ್ನೀರು, ಜೇನು ಬೆರೆತ ಹಾಲು, ಭ್ರಮರ ಬಂಧನ, ಚಂದನ ಕಸ್ತೂರಿ, ಸುವರ್ಣ ಕೇಸರಿ, ಸೊಬಗಿನ ಸೆರೆಮನೆ, ವಜ್ರ ಪಂಜರ, ಒಲಿದುಬಂದ ಅಪ್ಸರೆ, ದುಂಬಿ ಮುಟ್ಟದ ಹೂವು ಮುಂತಾದವು.

೬) **ಕಾಕೋಳು ಸರೋಜಾರಾವ್:** ದಿನಾಂಕ ೨೮-೧೨-೧೯೪೪ ರಂದು ಬೆಂಗಳೂರಿನಲ್ಲಿ ಜನಿಸಿದ್ದರು ಇವರು ದಿನಾಂಕ ೧೮-೧೧-೨೦೦೬ರಂದು ಬೆಂಗಳೂರಿನಲ್ಲಿ ನಿಧನರಾದರು. ಇವರು ೮೦ಕ್ಕೂ ಹೆಚ್ಚು ಜನಪ್ರಿಯ ಕಾದಂಬರಿಗಳನ್ನು ರಚಿಸಿ ಖ್ಯಾತರಾಗಿದ್ದರು. ಮುಖ್ಯಕೃತಿಗಳು: ಬಲಿದಾನ್, ಕುಂಕುಮ ಬಲ, ಅವಳ ಹೆಜ್ಜೆ, ಹೊನ್ನಿನ ಹಂಬಲಾ, ಚಿಗುರೆಲೆ ಬಾಡಿದಾಗ, ಚಿರವಿರಹಿ, ಬೆಳಕುಹರಿದಾಗ, ಹೆಜ್ಜೆಗೆಜ್ಜೆ, ಗೆದ್ದವರು ಯಾರು?, ಪರ್ವಕಾಲ, ಮೋಹದ ಬಲೆ, ದೆವ್ವದ ಮನೆ, ಗುಪ್ತಗಾಮಿನಿ, ಶರಣಾಗತ, ಎರಡುಮನೆ ಮುಂತಾದವು.

೭) **ಕನ್ನಡಪರ ಚಿಂತಕ ತ.ರಂ. ಕೃಷ್ಣೇಗೌಡ** (ಜನನ ೧೯೩೪) 'ಭಾರತೀಯ ಕರ್ನಾಟಕ ಸಂಘ'ದ ಮುಖ್ಯಸ್ಥರು, ಎನ್.ಜಿ.ಇ.ಎಫ್. ಸಂಸ್ಥೆಯ ಹಿರಿಯ ತಾಂತ್ರಿಕ ಅಧಿಕಾರಿಯಾಗಿದ್ದ ತ.ರಂ. ಕೃಷ್ಣೇಗೌಡರು ದಿನಾಂಕ ೦೨-೧೦-೨೦೦೬ರಂದು ನಿಧನರಾದರು. ಕನ್ನಡ ಬಳಕೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ತಂತ್ರಜ್ಞಾನ ಮತ್ತು ಔದ್ಯೋಗಿಕ ಕ್ಷೇತ್ರದಲ್ಲಿ ಅನುಷ್ಠಾನಗೊಳಿಸಿದ ಮೊದಲಿಗರೆಂಬ ಕೀರ್ತಿಗೆ ಭಾಜನರಾಗಿದ್ದರು. ೧೯೯೪ರಲ್ಲಿ ರಾಜ್ಯ ಸರ್ಕಾರ ಇವರಿಗೆ ರಾಜ್ಯ ಪ್ರಶಸ್ತಿ ನೀಡಿ ಪುರಸ್ಕರಿಸಿತ್ತು.

೮) **ಕನ್ನಡ ಕಾರ್ಯಕರ್ತ ಎನ್. ರಾಜಶೇಖರಯ್ಯ** ಐದು ದಶಕಗಳಿಂದ ಕನ್ನಡ ನಾಡು – ನುಡಿ, ಪ್ರಚಾರ, ಪ್ರಗತಿಗಾಗಿ ತಮ್ಮನ್ನು ತೊಡಗಿಸಿಕೊಂಡಿದ್ದ ಅಪ್ಪಟ ಕರ್ಮಯೋಗಿ ಎನ್. ರಾಜಶೇಖರಯ್ಯ ೦೨-೦೮-೨೦೦೬ರಂದು ಬೆಂಗಳೂರಿನಲ್ಲಿ ನಿಧನರಾದರು.

೯) **ಆರ್.ವಿ. ಕುಲಕರ್ಣಿ (ರಾ.ಕು.)** ಜನನ: ೧೯೧೮ ಹುಬ್ಬಳ್ಳಿಯಲ್ಲಿ ಪ್ರೌಢ ಶಾಲೆಯ ಉಪಾಧ್ಯಾಯರು. ಖ್ಯಾತ ಪ್ರಬಂಧಕಾರರು, ರಾಜ್ಯ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ ಪುರಸ್ಕೃತರು, ಇವರ ಪ್ರಮುಖ ಕೃತಿಗಳು: ಕಬ್ಬಿಗರ ಕಾವ್ಯ, ನೇಮಿನಾಥ ಪುರಾಣ, ಚಂದ್ರಪ್ರಭ ಪುರಾಣ (ಗದ್ಯಾನುವಾದ), ಗಾಳಿಪಟ, ದೇವಕನ್ಯೆ (ಪ್ರಬಂಧ) ಇವರು ಇತ್ತೀಚೆಗೆ ನಿಧನರಾದರು.

೧೦) ಎನ್.ಪಿ. ಶಂಕರನಾರಾಯಣರಾವ್ (೧೯೨೮-೨೦೦೬) ಇವರು ೨೮ ನವೆಂಬರ್ ೨೦೦೬ರಂದು ಬೆಂಗಳೂರಿನಲ್ಲಿ ನಿಧನರಾದರು. 'ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು', 'ಮೈಸೂರು ಸಂಸ್ಥಾನದ ಮೊದಲ ಕಮ್ಯುನಿಸ್ಟರು', 'ಪಂಜೆ ಯರವ ಸಮಾಜ', 'ಫಣಿ ಯರವ ಸಮಾಜ', ಸಂಸ್ಕೃತಿಯ ರೂಪಕೆಗಳು ಮುಂತಾದ ಐವತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದರು. ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ ಬಂದಿತ್ತು.

ಮೇಲ್ಕಂಡ ಎಲ್ಲಾ ದಿವಂಗತರುಗಳಿಗೆ
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಗೌರವಪೂರ್ವಕವಾಗಿ
ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದೆ. □

ಮುದ್ರಕರು : ಇಳಾ ಮುದ್ರಣ, ನಂ. ೩೬, ೪೦ ಅಡಿ ರಸ್ತೆ, ರಾಘವನಗರ, ನ್ಯೂ ಟಿಂಬರ್‌ಯಾರ್ಡ್ ಲೇಔಟ್, ಬೆಂಗಳೂರು – ೨೬. ✆ : ೨೬೭೫೭೧೯೯